ಮಗು ಸ್ನೇಹಿ ಸಮಾಜಕ್ಕಾಗಿ

# ಶಿಕ್ಷಣ ಸಂಚಲನ

ಸಂಚಿಕೆ 2. 2015–16 ಖಾಸಗಿ ಪ್ರಸಾರಕ್ಕಾಗಿ ಮಾತ್ರ



## ಮಗು ಸ್ನೇಹಿ ಶಿಕ್ಷಣದತ್ತ ನಮ್ಮ ಹೆಜ್ಜೆ

ಬದಲಾಗುತ್ತಿರುವ ವ್ಯವಸ್ಥೆಗೆ ಹೊಸತನವನ್ನು ಆಳವಡಿಸಿ ಸಮಾಜದ ಸೃಜಾನಾತ್ಮಕ ಬೆಳವಣಿಗೆಯ ಪ್ರಕ್ರೀಯೆಯಲ್ಲಿ ಪಡಿ ಸಂಸ್ಥೆಯು ಕಳೆದ ಎರಡು ದಶಕಗಳಿಂದಲೂ ತನ್ನನ್ನು ತಾನು ತೊಡಗಿಸಿಕೊಂಡಿದೆ ಹಾಗೂ **'ಮಾನವೀಯ ಸಮಾಜಕ್ಕಾಗಿ ಶಿಕ್ಷಣ'** ಎಂಬ ಧ್ಯೇಯೋದ್ದೇಶದ ಈಡೇರಿಕೆಗಾಗಿ ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಮೌಲ್ಯಯುತ ಶಿಕ್ಷಣ ಎಂಬ ಎರಡು ಪ್ರಮುಖ ಕಾರ್ಯಕ್ಷೇತ್ರವನ್ನು ಆಯ್ಕೆ ಮಾಡಿ ದ.ಕ ಮತ್ತು ಉಡುಪಿ ಜಿಲ್ಲೆಯಲ್ಲಿ ಶಿಕ್ಷಣ ಇಲಾಖೆಯ ಸಹಕಾರ ಮತ್ತು ಶಿಕ್ಷಣ ಸಂಪನ್ಮೂಲ ಕೇಂದ್ರದ ಸಹಭಾಗಿತ್ವದಲ್ಲಿ ಕಾರ್ಯೋನ್ಮುಖವಾಗಿದೆ.

ತನ್ನ ಯೋಜನೆಗಳಲ್ಲಿ ಒಂದಾದ **'ಮಗು ಸ್ನೇಹಿ ವಾತಾವರಣವು ಶಾಲೆಯಲ್ಲಿನ ಶಿಕ್ಷಣದ ಮಟ್ಟವನ್ನುಗುಣಾತ್ಮಕವಾಗಿ ಹೆಚ್ಚಿಸುತ್ತದೆ'** ಎಂಬ ಪರಿಕಲ್ಪನೆಯ ಸಾಕಾರಕ್ಕಾಗಿ ಹಲವು ಕಾರ್ಯಚಟುವಟಿಕೆಯನ್ನು ಕಳೆದ ಎರಡು ವರ್ಷದಲ್ಲಿ ಸಮುದಾಯ ಮತ್ತು ಇಲಾಖಾ ಸಹಕಾರದೊಂದಿಗೆ ಹಮ್ಮಿಕೊಂಡಿದೆ. ಪಡಿ ಸಂಸ್ಥೆಯು ಮಗು ಸ್ನೇಹಿ ಪರಿಕಲ್ಪನೆಯನ್ನು ಪ್ರಾಯೋಗಿಕವಾಗಿ ಅನುಷ್ಠಾನ ಮಾಡಲು ಹಲವು ಚಟುವಟಿಕೆಯನ್ನು ಹಮ್ಮಿಕೊಳ್ಳುತ್ತಾ ಬಂದಿದೆ. ಈ ಸಂದರ್ಭದಲ್ಲಿ ಅನೇಕ ಕಲಿಕೆಗಳನ್ನು ಮಾಡುತ್ತಾ, ಮಗು ಸ್ನೇಹಿ ಸಮಾಜಕ್ಕಾಗಿ ಶಿಕ್ಷಣವನ್ನು ಬಲಪಡಿಸುವ ಆಶಯಕ್ಕೆ ಪಡಿ ಸಂಸ್ಥೆ ಮತ್ತು ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಈ ಪ್ರಯತ್ನಕ್ಕೆ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ 8 ಗ್ರಾಮ ಪಂಚಾಯತು ಮತ್ತು 24 ಶಾಲೆಗಳಲ್ಲಿ ನಡೆಯುತ್ತಿರುವ ಪ್ರಕ್ರಿಯೆಗೆ ತಳಮಟ್ಟದಲ್ಲಿ ಉತ್ತರ ಕಂಡುಕೊಳ್ಳಲು ಸಾಧ್ಯವಾಗುತ್ತಿದೆ.

ಜಿಲ್ಲಾಡಳಿತ, ಅದರಲ್ಲೂ ಸಾರ್ವಜನಿಕ ಶಿಕ್ಷಣ ಇಲಾಖೆಯು ಪಡಿ ಸಂಸ್ಥೆಯ ಈ ಕಾರ್ಯಕ್ರಮದಲ್ಲಿ ಸಹಭಾಗಿಗಳಾಗಿ ಸರಕಾರಿ ಶಾಲೆಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಸ್ಥಳೀಯ ಆಡಳಿತ ಮತ್ತು ಸಮುದಾಯ ಕೂಡಾ ಈ ಸೃಜಾನಾತ್ಮಕ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಿದೆ. 2015–16ನೇ ಸಾಲಿನ ಕಾರ್ಯ ಚಟುವಟಿಕೆಯ ವರದಿ ಮತ್ತು ಕಲಿಕೆಯನ್ನು ಈ ಸಂಚಿಕೆಯಲ್ಲಿ ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇವೆ.

## 1. ಮಗು ಸ್ನೇಹಿ ಶಾಲೆ:

ಮಗು ಸ್ನೇಹಿ ಶಾಲೆಯು ಹೇಗಿರಬೇಕು ಎಂಬುದರ ಬಗ್ಗೆ ಪಡಿಯು ಅನೇಕ ರೀತಿಯಲ್ಲಿ ಅಧ್ಯಯನ ಮಾಡಿ ಅಭಿವೃದ್ಧಿ ಪಡಿಸಿದ ಮಾನದಂಡಗಳನ್ನು ಅನುಷ್ಠಾನ ಮಾಡಲು ಶಿಕ್ಷಣ ಇಲಾಖೆಯ ಅಧಿಕಾರಿಗಳು, ಶಾಲೆಗಳಲ್ಲಿ ಶಿಕ್ಷಕರು, ಮುಖ್ಯೋಪಾಧ್ಯಾಯರು ಮತ್ತು ಎಸ್.ಡಿ.ಎಮ್.ಸಿಯೊಂದಿಗೆ ಸಮಾಲೋಚನಾ ಸಭೆಯನ್ನು ನಡೆಸಿ ಮಾದರಿ ಮಗು ಸ್ನೇಹಿ ಶಾಲೆಯು ಹೇಗಿರಬೇಕು ಎಂಬುದರ ಬಗ್ಗೆ ಸಾಕಷ್ಟು ವಿಚಾರ ವಿನಿಮಯವನ್ನು ನಡೆಸಲಾಗಿದೆ. ಮಗು ಸ್ನೇಹಿ ಶಾಲೆಯ ಪರಿಕಲ್ಪನೆಯನ್ನು ಅನುಷ್ಠಾನಗೊಳಿಸಲು ಶಾಲೆಗಳಲ್ಲಿ ಮೀನಾ ಕ್ಲಬ್ ಮತ್ತು ಮಕ್ಕಳ ಹಕ್ಕುಗಳ ಕ್ಲಬ್‌ಗಳನ್ನು ಪರಿಣಾಮಕಾರಿಯಾಗಿ ರೂಪಿಸಲು ಕ್ಲಬ್‌ಗಳ ಸದಸ್ಯರಿಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅಲ್ಲದೆ ಪ್ರತಿ ಶಾಲೆಯ ಮೀನಾ ಮತ್ತು ಮಕ್ಕಳ ಹಕ್ಕುಗಳ ಕ್ಲಬ್‌ನ ಸದಸ್ಯರಿಗೆ ಮತ್ತು ಇತರ ಮಕ್ಕಳಿಗೆ ನಾಯಕತ್ವ ತರಬೇತಿಯ ಜೊತೆಗೆ ಮಕ್ಕಳಲ್ಲಿ ಕ್ರೀಯಾಶೀಲತೆಯನ್ನು ರೂಪಿಸುವ ತರಬೇತಿಯನ್ನು ನೀಡಲಾಗಿದೆ. ಶಾಲಾ ಹಂತದಲ್ಲಿ ಮಕ್ಕಳಿಗೆ ಉತ್ತಮ ಕಲಿಕಾ ವಾತಾವರಣ ರೂಪಿಸುವುದರೊಂದಿಗೆ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಸನ್ನಿವೇಶವನ್ನು ರೂಪಿಸುವ ಎಲ್ಲ ಅವಕಾಶವನ್ನು ಒದಗಿಸುವಲ್ಲಿ ಪ್ರಯತ್ನವನ್ನು ಮಾಡಿದೆ. ಒಂದು ಮಾದರಿ ಮಗು ಸ್ನೇಹಿ ಶಾಲೆಯು ಒಳಗೊಳ್ಳಬೇಕಾದ ಪ್ರಮುಖ ಅಂಶಗಳನ್ನು ರೂಪಿಸುವಲ್ಲಿ ಕೈಗೊಳ್ಳಬೇಕಾದ ಕಾರ್ಯಕ್ರಮಗಳನ್ನು ಆಯ್ಕೆ ಮಾಡಿ ಅವುಗಳನ್ನು ಅನುಷ್ಠಾನ ಮಾಡುವಲ್ಲಿ ಕಾರ್ಯತತ್ಪರವಾಗಿದೆ.



**ಶಿಕ್ಷೆ ರಹಿತ ಶಿಕ್ಷಣದ ಪ್ರೇರಣೆಗಾಗಿ ಮಗು ಸ್ನೇಹಿ ಶಾಲೆಯಲ್ಲಿ ಕೈಗೊಂಡ ಪ್ರಮುಖ ಚಟುವಟಿಕೆಗಳು:**

- ಎಸ್.ಡಿ.ಎಮ್.ಸಿ ಸದಸ್ಯರೊಂದಿಗೆ ಸಮಾಲೋಚನಾ ಸಭೆಗಳು
- ಸಮುದಾಯ ಅರಿವು ಕಾರ್ಯಕ್ರಮ
- ಗ್ರಾಮ ಪಂಚಾಯತು ಸದಸ್ಯರೊಂದಿಗೆ ಸಮಾಲೋಚನಾ ಸಭೆ
- ಶಾಲಾ ಮುಖ್ಯೋಪಾದ್ಯಾಯರೊಂದಿಗೆ ಮತ್ತು ಶಿಕ್ಷಕರೊಂದಿಗೆ ಸಮಾಲೋಚನಾ ಸಭೆಗಳು
- ಮಗು ಸ್ನೇಹಿ ಶಾಲೆಗೆ ಸಂಬಂಧಿಸಿದ ಸೂಚ್ಯಂಕದ ಮೇಲ್ವಿಚಾರಣೆಗೆ ನಿರಂತರ ಶಾಲಾ ಭೇಟಿ.
- ಶಾಲೆಗಳಲ್ಲಿ ಮಕ್ಕಳ ನಿರಂತರ ಹಾಜಾರಾತಿ ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳಿಗಾಗಿ ವಿವಿಧ ಕಾರ್ಯಕ್ರಮಗಳು

**ಮೀನಾ ಮತ್ತು ಮಕ್ಕಳ ಹಕ್ಕುಗಳ ಕ್ಲಬ್ ಸಂಘದ ಬಲವರ್ಧನೆಗೆ ಕಾರ್ಯಕ್ರಮಗಳು**

- ಮೀನಾ ಕ್ಲಬ್ ಹಾಗೂ ಮಕ್ಕಳ ಹಕ್ಕುಗಳ ಕ್ಲಬ್ ಸದಸ್ಯರಿಗೆ ಕ್ರಾಪ್ಟ್ ತಯಾರಿಕೆಯ ತರಬೇತಿ.
- ಮೀನಾ ಕ್ಲಬ್ ಹಾಗೂ ಮಕ್ಕಳ ಹಕ್ಕುಗಳ ಕ್ಲಬ್ ಸದಸ್ಯರಿಗೆ ಶಿಕ್ಷಣ ಸಂಪನ್ಮೂಲ ಕೇಂದ್ರದ ಸದಸ್ಯರಿಂದ ಹದಿಹರೆಯದ ಹಾಗೂ ಜೀವನ ಕೌಶಲ್ಯಗಳ ತರಬೇತಿ
- ಮೀನಾ ಕ್ಲಬ್ ಹಾಗೂ ಮಕ್ಕಳ ಹಕ್ಕುಗಳ ಕ್ಲಬ್ ಸದಸ್ಯರಿಗೆ ಮೀನಾಳು ನಡೆದು ಬಂದ ಕಥೆಯ ಸಾಕ್ಷ್ಯಚಿತ್ರದ ಮೂಲಕ ಸಮಸ್ಯೆಯನ್ನು ಎದುರಿಸುವ ಬಗ್ಗೆ ಪ್ರೇರಣೆ .
- ಮೀನಾ ಕ್ಲಬ್ ಹಾಗೂ ಮಕ್ಕಳ ಹಕ್ಕುಗಳ ಕ್ಲಬ್ ಸದಸ್ಯರಿಗೆ ಮಕ್ಕಳ ರಕ್ಷಣಾ ವ್ಯವಸ್ಥೆಯ ಬಗ್ಗೆ ತರಬೇತಿ
- ಮೀನಾ ಕ್ಲಬ್ ಹಾಗೂ ಮಕ್ಕಳ ಹಕ್ಕುಗಳ ಕ್ಲಬ್ ಸದಸ್ಯರಿಗೆ ಪೋಕ್ಸೋ ತರಬೇತಿ ಹಾಗೂ ಸುರಕ್ಷಿತ ಸ್ಪರ್ಶ ಹಾಗೂ ಅಸುರಕ್ಷಿತ ಸ್ಪರ್ಶದ ಬಗ್ಗೆ ಮಾಹಿತಿ.
- ಪ್ರಾಥಮಿಕ ಆರೋಗ್ಯ ಕೇಂದ್ರದ ಸಹಭಾಗಿತ್ವದಲ್ಲಿ ಪ್ರಥಮ ಚಿಕಿತ್ಸಾ ತರಬೇತಿ.

**ಮಗು ಸ್ನೇಹಿ ಶಾಲೆಯಲ್ಲಿ ಕಂಡು ಬಂದಂತಹ ಪ್ರಮುಖ ಬದಲಾವಣೆ**

- ಮೀನಾ ಕ್ಲಬ್ ಮತ್ತು ಮಕ್ಕಳ ಹಕ್ಕುಗಳ ಕ್ಲಬ್‌ಗಳು ಕ್ರಿಯಾ ಶೀಲಾವಾಗುತ್ತಿದ್ದು ಸರಿಯಾಗಿ ಸಭೆಗಳನ್ನು ನಡೆಸುತ್ತಾ ಬರುತಿದ್ದು ತಮ್ಮ ಶಾಲಾ ವ್ಯಾಪ್ತಿಯಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಈ ಕ್ಲಬ್‌ಗಳು ಪ್ರಜಾಪ್ರಭುತ್ವ ಮಾದರಿಯಲ್ಲಿ ಕಾರ್ಯ ನಿರ್ವಹಿಸುವುದರೊಂದಿಗೆ ಮಕ್ಕಳಲ್ಲಿ ನಾಯಕತ್ವ ಗುಣವನ್ನು ಬೆಳೆಸುವಲ್ಲಿ ಸಹಕಾರಿಯಾಗಿದೆ.



- ಎಸ್.ಡಿ.ಎಮ್.ಸಿಯು ತಮ್ಮ ಶಾಲೆಗಳ ಮೇಲ್ವಿಚಾರಣೆಯು ಪರಿಣಾಮಕಾರಿಯಾಗಿ ಮಾಡುವಲ್ಲಿ ಮತ್ತು ಸಭೆಯಲ್ಲಿ ಶಾಲೆಯ ಸರ್ವತೋಮುಖ ಅಭಿವೃದ್ಧಿಯ ಕುರಿತು ಚರ್ಚಿಸಲಾಗುತ್ತಿದೆ.
- ಪಂಚಾಯತುಗಳ ಮತ್ತು ಸಮುದಾಯದ ಪಾಲ್ಗೋಳ್ಳುವಿಕೆ ಜಾಸ್ತಿಯಾಗುತ್ತಿದೆ.
- ಮೀನಾ ಕ್ಲಬ್ ಹಾಗೂ ಮಕ್ಕಳ ಹಕ್ಕುಗಳ ಕ್ಲಬ್‌ನ ಸಭೆಗಳು ಉತ್ತಮ ರೀತಿಯಲ್ಲಿ ನಡೆಯುತ್ತಿದ್ದು ಶಾಲೆಗೆ ಗೈರು ಹಾಜರಾಗುತ್ತಿರುವ ಮಕ್ಕಳ ಮನೆ ಭೇಟಿ ಮಾಡಿ ಮಕ್ಕಳನ್ನು ಶಾಲೆಗೆ ಕರೆ ತರುವ ವ್ಯವಸ್ಥೆಯನ್ನು ಮಾಡಿದೆ.

## 2. ಮಗು ಸ್ನೇಹಿ ಪಂಚಾಯತು:

ಪಡಿಯ ಇನ್ನೊಂದು ಪ್ರಮುಖ ಆಶಯಗಳಲ್ಲಿ ಒಂದಾದ ಮಗು ಸ್ನೇಹಿ ಪಂಚಾಯತು ಪರಿಕಲ್ಪನೆಯನ್ನು ಅನುಷ್ಠಾನ ಮಾಡಲು ಕಳೆದ ಒಂದು ವರ್ಷದಲ್ಲಿ ಸಾಕಷ್ಟು ಕಾರ್ಯಕ್ರಮವನ್ನು ಸಮಾಲೋಚನೆಯನ್ನು ಹಮ್ಮಿಕೊಂಡಿದ್ದರೂ ಪಂಚಾಯತು ಸದಸ್ಯರ ಅವಧಿ ಮುಗಿದು ಚುನಾವಣೆ ನಡೆದು ಹೊಸ ಪಂಚಾಯತ್ ಸದಸ್ಯರು ಆಯ್ಕೆಯಾಗಿರುವುದರಿಂದ ಅವರಿಗೆ ಈ ಪರಿಕಲ್ಪನೆಯ ಬಗ್ಗೆ ಅರಿವು ಮೂಡಿಸಲು ಸಮಾಲೋಚನಾ ಸಭೆಯನ್ನು ಆಯೋಜಿಸಲಾಯಿತು. ಆಯ್ಕೆಯ ಪಂಚಾಯತು ಸದಸ್ಯರಿಗೆ ಮಗು ಸ್ನೇಹಿ ಪರಿಕಲ್ಪನೆಯೊಂದಿಗೆ ಶಾಲೆಯ ಮೇಲ್ವಿಚಾರಣೆಯ ಬಗ್ಗೆ ಚರ್ಚೆ ನಡೆಸಲಾಯಿತು.

**ಮಗು ಸ್ನೇಹಿ ಪಂಚಾಯತ್‌ಗಾಗಿ ಕೈಗೊಂಡ ಪ್ರಮುಖ ಚಟುವಟಿಕೆಗಳು:**

- ಪಂಚಾಯತ್ ಸದಸ್ಯರಿಗೆ ಮಗು ಸ್ನೇಹಿ ಶಾಲೆ ಹಾಗೂ ಮಗು ಸ್ನೇಹಿ ಪಂಚಾಯತ್ ಸಮಾಲೋಚನಾ ಸಭೆಯನ್ನು ಹಮ್ಮಿಕೊಳ್ಳಲಾಯಿತು.
- ಮಗು ಸ್ನೇಹಿ ಪಂಚಾಯತು ಸೂಚ್ಯಂಕದ ಕುರಿತಂತೆ ಪಂಚಾಯತು ಅಧ್ಯಕ್ಷರು ಮತ್ತು ಸದಸ್ಯರು ಹಾಗೂ ಪಂಚಾಯತು ಅಭಿವೃದ್ಧಿ ಅಧಿಕಾರಿಗಳೊಂದಿಗೆ ನಿರಂತರ ಚರ್ಚೆ ಮತ್ತು ಸಂವಾದ
- ಜಿಲ್ಲಾ ಪಂಚಾಯತು ಮುಖ್ಯ ಕಾರ್ಯನಿರ್ವಾಹಕರೊಂದಿಗೆ ಸಮಾಲೋಚನಾ ಸಭೆ.



**ಮಗು ಸ್ನೇಹಿ ಶಾಲೆ ಮತ್ತು ಮಗು ಸ್ನೇಹಿ ಪಂಚಾಯತು ಪರಿಕಲ್ಪನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಜಿಲ್ಲಾ ಮಟ್ಟದ ಸಭೆ:**

**ಮಗು ಸ್ನೇಹಿ ಶಾಲೆ ಮತ್ತು ಪಂಚಾಯತ್‌ನ ಕುರಿತಂತೆ ದ.ಕ ಜಿಲ್ಲೆಯ ಶಿಕ್ಷಣ ಇಲಾಖೆಯೊಂದಿಗೆ ಸಮಾಲೋಚನೆ:**

ಪಡಿ ಸಂಸ್ಥೆಯು ಕಳೆದ ಒಂದು ವರ್ಷದಿಂದ ನಿರಂತರವಾಗಿ ಮಗು ಸ್ನೇಹಿ ಶಾಲೆ ಮತ್ತು ಪಂಚಾಯತ್ ಪರಿಕಲ್ಪನೆಯಲ್ಲಿ ದ.ಕ. ಜಿಲ್ಲೆಯ ಶಾಲೆಗಳಲ್ಲಿ ಮಗು ಸ್ನೇಹಿ ಶಾಲೆ ಮತ್ತು ಪಂಚಾಯತ್ ಕುರಿತು ಈಗಾಗಲೇ ತಳಮಟ್ಟದಿಂದ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿದ್ದು ಇದರ ಮುಂದಿನ ಅನುಸರಣೆಯಾಗಿ ಕಾರ್ಯಕ್ರಮಗಳನ್ನು ಇನ್ನಷ್ಟು ಬಲಗೊಳಿಸುವ ನಿಟ್ಟಿನಿಂದ ಕೈಗೊಳ್ಳಬೇಕಾದ ಚಟುವಟಿಕೆಗಳ ಬಗ್ಗೆ ಮತ್ತು ಸಲಹಾ ಸೂಚನೆಗಳನ್ನು ಸಂಗ್ರಹಿಸಿಕೊಂಡು ಕಾರ್ಯರೂಪಕ್ಕೆ ತರುವ ದೃಷ್ಟಿಯಿಂದ ಸಮಾಲೋಚನಾ ಸಭೆಯನ್ನು ಆಯೋಜಿಸಲಾಗಿತ್ತು.




ಈ ಜಿಲ್ಲಾ ಮಟ್ಟದ ಸಮಾಲೋಚನಾ ಸಭೆಯು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಮಾರ್ಗದರ್ಶನದಲ್ಲಿ ಮತ್ತು ಡಯಟ್ ಉಪನ್ಯಾಸಕರ ಹಾಗೂ ಶಿಕ್ಷಣ ಸಂಪನ್ಮೂಲ ಕೇಂದ್ರದ ಉಪಸ್ಥಿತಿಯಲ್ಲಿ ಹಾಗೂ ಪಡಿ ಸಂಸ್ಥೆಯ ನೇತೃತ್ವದಲ್ಲಿ ದ.ಕ ಜಿಲ್ಲಾ ಪಂಚಾಯತ್‌ನ ಮಿನಿ ಸಭಾಂಗಣದಲ್ಲಿ ನಡೆಯಿತು.

ಈ ಸಭೆಯಲ್ಲಿ ಸರ್ವ ಶಿಕ್ಷಣ ಅಭಿಯಾನದ ಶ್ರೀಮತಿ ಗೀತಾ, ಡಯೆಟ್‌ನ ಉಪನ್ಯಾಸಕರಾದ ಸುಮಂಗಳ, ಮಂಗಳೂರು ಕ್ಷೇತ್ರ ಶಿಕ್ಷಣಾಧಿಕಾರಿಯಾದ ಶ್ರೀ ಜ್ಞಾನೇಶ್, ಶ್ರೀಮತಿ ರಾಜೇಶ್ವರಿ, ಇ. ಒ ಆದ ಸದಾನಂದ ಪೂಂಜಾ, ಕ್ಷೇತ್ರ ಸಮನ್ವಯಾಧಿಕಾರಿಗಳು, ಬಿ.ಆರ್.ಪಿ, ಸಿ.ಆರ್.ಪಿ ವೇದಿಕೆಯಲ್ಲಿದ್ದು, ಈ ಸಮಾಲೋಚನಾ ಸಭೆಗೆ ದ.ಕ. ಜಿಲ್ಲಾ 5 ತಾಲೂಕುಗಳಾದ ಮಂಗಳೂರು, ಬಂಟ್ವಾಳ, ಪುತ್ತೂರು, ಸುಳ್ಯ ಹಾಗೂ ಬೆಳ್ತಂಗಡಿಯ ಯೋಜನಾ ವ್ಯಾಪ್ತಿಯ ಶಾಲಾ ಮುಖ್ಯೋಪಾಧ್ಯಾಯರು, ಎಸ್.ಡಿ.ಎಮ್.ಸಿ ಅಧ್ಯಕ್ಷರು ಮತ್ತು ಸದಸ್ಯರು ಹಾಗೂ ಪಂಚಾಯತ್‌ನ ಅಭಿವೃದ್ಧಿ ಅಧಿಕಾರಿಗಳು ಹಾಗೂ ಶಿಕ್ಷಣ ಸಂಪನ್ಮೂಲ ಕೇಂದ್ರದ ಅಧ್ಯಕ್ಷರು, ಸದಸ್ಯರು ಹಾಗೂ ಪಡಿ ಸಂಸ್ಥೆಯ ಸಿಬ್ಬಂದಿಗಳು ಹಾಜರಿದ್ದರು. ಪ್ರಮುಖವಾಗಿ ಸಭೆಯಲ್ಲಿ ಪಡಿಯು ಕಳೆದ ಒಂದು ವರ್ಷದಲ್ಲಿ ಮಗು ಸ್ನೇಹಿ ಪರಿಕಲ್ಪನೆ ಮತ್ತು ಶಿಕ್ಷಣ ಹಕ್ಕು ಕೋಶದಲ್ಲಿ ನಡೆಸಿದ ಕಾರ್ಯಚಟುವಟಿಕೆಗಳ ವರದಿಯನ್ನು ಮಂಡಿಸಲಾಯಿತು ಹಾಗೂ ಈ ಕುರಿತಂತೆ ಮುಂದೆ ನಡೆಸಬಹುದಾದ ಕಾರ್ಯಗಳ ಬಗ್ಗೆ ವಿಸ್ತೃತ ಚರ್ಚೆ ನಡೆಸಿ ಈ ಕೆಳಗಿನ ನಿರ್ಣಯಗಳನ್ನು ಕೈಗೊಳ್ಳಲಾಯಿತು.

- ಮಗು ತನ್ನ ಸಮಸ್ಯೆಯನ್ನು ವ್ಯಕ್ತಪಡಿಸಲು ಪ್ರತ್ಯೇಕ ವೇದಿಕೆಯನ್ನು ಕಲ್ಪಿಸಿಕೊಡಬೇಕು, ಶಾಲೆಗಳಲ್ಲಿ ಮಕ್ಕಳ ಸಲಹಾ ಪೆಟ್ಟಿಗೆಯನ್ನು ಅಳವಡಿಸುವುದು ಮತ್ತು ಶಾಲೆಗಳಲ್ಲಿ ಮೀನಾ ಕ್ಲಬ್ ಮತ್ತು ಮಕ್ಕಳ ಹಕ್ಕುಗಳ ಕ್ಲಬ್‌ನ್ನು ಬಲಗೊಳಿಸುವುದು.
- ಸಮುದಾಯದತ್ತ ಶಾಲೆ, ಪ್ರತಿಭಾ ಕಾರಂಜಿಗಳಂತಹ ಕಾರ್ಯಕ್ರಮಗಳನ್ನು ಶಾಲೆಗಳಲ್ಲಿ ಮಾಡಬೇಕು. ಇದು ಮಕ್ಕಳ



ಸಮುದಾಯದ ಭಾಗವಹಿಸುವಿಕೆಯನ್ನು ಹೆಚ್ಚಿಸುತ್ತದೆ ಮತ್ತು ಅದರ ಜೊತೆಗೆ ಮಕ್ಕಳ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸಲು ಸಾಧ್ಯವಾಗುತ್ತದೆ.

- ❖ ಮಕ್ಕಳ ಗ್ರಾಮಸಭೆಗಳನ್ನು ಎಲ್ಲಾ ತಾಲೂಕುಗಳಲ್ಲಿ ಕಡ್ಡಾಯವಾಗಿ ಮಾಡುವುದು.
- ❖ ಮಕ್ಕಳು ಕಡ್ಡಾಯವಾಗಿ ಶಾಲೆಯಲ್ಲಿ ಹಾಜರಿರುವಂತೆ ಮಾಡಲು ಸಂಬಂಧಪಟ್ಟ ಅಧಿಕಾರಿಗಳು ಶಾಲೆಗಳಿಗೆ ಭೇಟಿ ನೀಡಿ ಮಕ್ಕಳ ಜೊತೆ ಸಂವಾದ ನಡೆಸುವಂತಹದ್ದು.
- ❖ ಶಾಲೆಯಲ್ಲಿನ ಮಕ್ಕಳು ಮಾದಕ ವ್ಯಸನದಿಂದ ಮುಕ್ತವಾಗುವಂತೆ ಮಾಡುವುದು.
- ❖ ಶಾಲೆಯ ಎಲ್ಲಾ ಮಕ್ಕಳಿಗೆ ಸಮಾನ ಶಿಕ್ಷಣ ದೊರಕುವಂತೆ ಮಾಡುವುದು.
- ❖ ಶಾಲೆಯಲ್ಲಿ ಮಕ್ಕಳು ಇತರೆ ಕೆಲಸಗಳಿಗೆ ದುರುಪಯೋಗ ಆಗದಂತೆ ನೋಡಿಕೊಳ್ಳುವುದು

**ಉಡುಪಿ ಜಿಲ್ಲೆಯಲ್ಲಿ ನಡೆದ ಪ್ರಯತ್ನಗಳು:**

ಮಗು ಸ್ನೇಹಿ ಶಾಲೆ ಮತ್ತು ಮಗು ಸ್ನೇಹಿ ಪಂಚಾಯತು ಪರಿಕಲ್ಪನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಉಡುಪಿ ಜಿಲ್ಲಾ ಪಂಚಾಯತು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯ ನೇತೃತ್ವದಲ್ಲಿ ಶಿಕ್ಷಣ ಇಲಾಖೆ ಮತ್ತು ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ, ಆರೋಗ್ಯ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಉಪಸ್ಥಿತಿಯಲ್ಲಿ ರಜತಾದ್ರಿಯ ಜಿಲ್ಲಾ ಪಂಚಾಯತಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಕಛೇರಿಯಲ್ಲಿ ನಡೆಯಿತು.

ಉಡುಪಿ ಜಿಲ್ಲೆಯಲ್ಲಿ ಪಡಿಯು ತನ್ನ ಯೋಜನಾ ವ್ಯಾಪ್ತಿಯ ಶಾಲೆ ಮತ್ತು ಪಂಚಾಯತು ವ್ಯಾಪ್ತಿಯಲ್ಲಿ ಮಕ್ಕಳ ಸ್ನೇಹಿ ವಾತವರಣವನ್ನು ರೂಪಿಸುವಲ್ಲಿ ಇಲಾಖೆ ಮತ್ತು ಪಡಿಯು ಜಂಟಿಯಾಗಿ ನಿರ್ವಹಿಸ ಬಹುದಾದ ಕಾರ್ಯಚಟುವಟಿಕೆಗಳ ಬಗ್ಗೆ ಚರ್ಚೆಯನ್ನು ನಡೆಸಲಾಯಿತು ಅಲ್ಲದೆ ಇಲಾಖೆಗಳಿಂದ ದೊರಕಬಹುದಾದ ಸಹಕಾರಗಳ ಬಗ್ಗೆ ಚರ್ಚಿಸಲಾಯಿತು. ಸಭೆಯಲ್ಲಿ ಮೀನಾ ಕ್ಲಬ್ ಚಟುವಟಿಕೆಗಳ ಬಗ್ಗೆ, ಮಕ್ಕಳ ರಕ್ಷಣೆಯ ಹಕ್ಕು ಹಾಗೂ ಮಕ್ಕಳ ಸುರಕ್ಷತೆಯ ಬಗ್ಗೆ ಅದರಲ್ಲೂ ಪ್ರಮುಖವಾಗಿ ಹೆಣ್ಣು ಮಕ್ಕಳಲ್ಲಿ ಆತ್ಮಸ್ಥೈರ್ಯವನ್ನು ಹೆಚ್ಚಿಸಲು ಹಾಗೂ ಹೆಣ್ಣು ಮಕ್ಕಳ ಸಮಸ್ಯೆಗಳ ಬಗ್ಗೆ ಚರ್ಚಿಸಲು ಉತ್ತಮವಾದ ವೇದಿಕೆಯಾಗಿರುವುದರಿಂದ ಎಲ್ಲಾ ಶಾಲೆಗಳಲ್ಲಿ ಮೀನಾ ಕ್ಲಬ್ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ನಡೆಸಲು ನಿರ್ಣಯಿಸಲಾಯಿತು ಮತ್ತು ಎಸ್. ಡಿ.ಎಮ್.ಸಿ ಸದಸ್ಯರಿಗೆ ತರಬೇತಿ ನೀಡುವ ಸಂದರ್ಭದಲ್ಲಿ ಎಸ್.ಡಿ.ಎಮ್.ಸಿ ಮತ್ತು ವಿದ್ಯಾರ್ಥಿ ಸದಸ್ಯರಿಗೆ ಅವರ ಪಾತ್ರದ ಬಗ್ಗೆ ಪ್ರತ್ಯೇಕ ತರಬೇತಿ ನೀಡುವಂತೆ ಸೂಚಿಸಿದರು. ಅಲ್ಲದೆ ತಾಲೂಕು ಮಟ್ಟದಲ್ಲಿ ಮಕ್ಕಳ ಶಿಕ್ಷಣ ಹಕ್ಕು ಕೋಶ ರಚನೆಯ ಬಗ್ಗೆ ಚರ್ಚಿಸಲಾಯಿತು.



**ಸಭೆಯ ಪ್ರಮುಖ ನಿರ್ಣಯಗಳು:**

- ♦ 3 ತಾಲೂಕುಗಳ ಶಾಲೆಗಳಲ್ಲಿ ಪಡಿ ಸಂಸ್ಥೆಯು ತಮ್ಮ ಚಟುವಟಿಕೆಗಳನ್ನು ನಿರ್ವಹಿಸಲು ಅನುಮತಿ ನೀಡುವಂತೆ ಉಪನಿರ್ದೇಶಕರಿಗೆ ತಿಳಿಸಲಾಯಿತು.
- ♦ ಶಾಲೆಗಳಲ್ಲಿ ಹಮ್ಮಿಕೊಳ್ಳುವ ಚಟುವಟಿಕೆಗಳ ಬಗ್ಗೆ ಕ್ರೀಯಾ ಯೋಜನೆಯನ್ನು ರೂಪಿಸಿ ಉಪನಿರ್ದೇಶಕರ ಅನುಮತಿಯನ್ನು ಪಡೆಯುವಂತೆ ತಿಳಿಸಲಾಯಿತು.
- ♦ ಗ್ರಾಮ ಪಂಚಾಯತುಗಳ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳನ್ನು ಈ ಕಾರ್ಯಕ್ರಮದಲ್ಲಿ ತೊಡಗಿಸಿಕೊಳ್ಳುವಂತೆ ಸೂಚಿಸಲಾಯಿತು.
- ♦ ಗ್ರಾಮ ಸಭೆಗಳಿಗೆ ಮಕ್ಕಳು ಕಡ್ಡಾಯವಾಗಿ ಭಾಗವಹಿಸಲು ಕ್ರಮ ವಹಿಸುವಂತೆ ಶಾಲೆಯ ಮುಖ್ಯ ಶಿಕ್ಷಕರಿಗೆ ಸೂಚನೆ ನೀಡುವ ಕುರಿತು ನಿರ್ಣಯಿಸಲಾಯಿತು.

**ಉಡುಪಿ ಜಿ.ಪ. ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಭೇಟಿ**

ಅಲ್ಲದೆ ಮಗು ಸ್ನೇಹಿ ವಾತವರಣಕ್ಕೆ ಪೂರಕವಾಗಿ ಇಲಾಖಾ ವತಿಯಿಂದ ಜಿಲ್ಲಾ ಪಂಚಾಯತಿನ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳಾದಂತಹ ಪ್ರಿಯಾಂಕ ಮೇರಿ ಪ್ರಾನ್ಸಿಸ್‌ರವರು ಕುಂದಾಪುರ ತಾಲೂಕಿನ ಯೋಜನಾ ವ್ಯಾಪ್ತಿಯ ತಲ್ಲೂರು ಪಂಚಾಯತು ಮತ್ತು ಶಾಲೆಗೆ ಭೇಟಿ ನೀಡಿ ಶಾಲಾ ಸಮಸ್ಯೆಗಳ ಬಗ್ಗೆ ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳ ಮನೆ ಭೇಟಿಯನ್ನು ನೀಡಿ ಪರಿಸ್ಥಿತಿಯ ಅವಲೋಕನವನ್ನು ಮಾಡಿ ಸಮಸ್ಯೆಗಳ ಸ್ಪಂದನೆಗೆ ಸ್ಥಳೀಯ ಸರಕಾರಗಳಿಗೆ ಮಾರ್ಗದರ್ಶನವನ್ನು ನೀಡಿದರು.



**ಜಿಲ್ಲಾ ಶಿಕ್ಷಕರ ತರಬೇತಿ ಸಂಸ್ಥೆಯೊಂದಿಗಿನ (ಡಯಟ್) ಸಹಯೋಗದೊಂದಿಗೆ ಮಗು ಸ್ನೇಹಿ ಶಾಲೆಯ ಮೌಲ್ಯಮಾಪನ:**

ದ.ಕ. ಜಿಲ್ಲೆಯಲ್ಲಿ ಮಗು ಸ್ನೇಹಿ ಶಾಲಾ ವಾತಾವರಣ ನಿರ್ಮಾಣಕ್ಕಾಗಿ ಪಡಿಯು ಅಭಿವೃದ್ಧಿ ಪಡಿಸಿದ ಮಾನದಂಡಗಳ ಬಗ್ಗೆ ಮತ್ತು ಕಳೆದ ಎರಡು ವರ್ಷದಲ್ಲಿ ಅವುಗಳಲ್ಲಿ ಸಾಧಿಸಿದ ಅಂಶಗಳು ಮತ್ತು ಮಗು ಸ್ನೇಹಿ ಶಾಲಾ ವಾತಾವರಣವನ್ನು ರೂಪಿಸುವಲ್ಲಿ ಪಡಿಯು ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆ ಎಂಬುದರ ಬಗ್ಗೆ ಮೌಲ್ಯಮಾಪನವನ್ನು ಜಿಲ್ಲಾ ಶಿಕ್ಷಕರ ತರಬೇತಿ ಸಂಸ್ಥೆಯ ಮೂಲಕ ನಡೆಸುವ ಕುರಿತು ತೀರ್ಮಾನಿಸಿ ಮೌಲ್ಯ ಮಾಪನದ ರೂಪುರೇಷೆಗಳ ಬಗ್ಗೆ ಚರ್ಚಿಸಲು ಡಯಟ್‌ನೊಂದಿಗೆ ಸಮಾಲೋಚನಾ ಸಭೆಯನ್ನು ನಡೆಸಲಾಯಿತು. ಡಯಟ್‌ನ ಪ್ರಾಂಶುಪಾಲರು ಮತ್ತು ಉಪನ್ಯಾಸಕರು ಮತ್ತು ಪಡಿ ಸಂಸ್ಥೆಯ ಸಿಬ್ಬಂದಿ ಉಪಸ್ಥಿತರಿದ್ದು ಮೌಲ್ಯಮಾಪನದ ಕುರಿತಂತೆ ಈ ಕೆಳಗಿನ ನಿರ್ಣಯಗಳನ್ನು ಕೈಗೊಳ್ಳಲಾಯಿತು.



- ಮಗು ಸ್ನೇಹಿ ಶಾಲೆ ಪರಿಕಲ್ಪನೆಯಲ್ಲಿ ಡಯಟ್ ಹಾಗೂ ಪಡಿ ಸಂಸ್ಥೆಯು ಜೊತೆಗೂಡಿ ಕಾರ್ಯಚಟುವಟಿಕೆಗಳನ್ನು ಶಾಲೆಗಳಲ್ಲಿ ನಡೆಸಿದ್ದಲ್ಲಿ ಮುಂದಿನ ದಿನಗಳಲ್ಲಿ ಉತ್ತಮ ಫಲಿತಾಂಶ ದೊರಕಲು ಸಾಧ್ಯ ಎಂಬ ಆಶಯದೊಂದಿಗೆ ಮಗು ಸ್ನೇಹಿ ವಾತವರಣ ನಿರ್ಮಾಣ ಮಾಡಲು ಜಂಟಿಯಾಗಿ ಶ್ರಮಿಸುವ ಕುರಿತು ತೀರ್ಮಾನಿಸಲಾಯಿತು.
- 3 ತಿಂಗಳಿಗೊಮ್ಮೆ ಡಯಟ್‌ನ ಉಪನ್ಯಾಸಕರು ಪಡಿ ಯೋಜನಾ ವ್ಯಾಪ್ತಿಯ ಶಾಲಾ ಭೇಟಿ ನೀಡುವುದು ಮತ್ತು ಪಡಿಯ ಮಗು ಸ್ನೇಹಿ ಶಾಲೆಯ ಸೂಚ್ಯಂಕದ ಆಧಾರದಲ್ಲಿ ಮೌಲ್ಯಮಾಪನ ಮಾಡುವುದು.
- ಪಡಿ ಹಾಗೂ ಡಯಟ್ ಜೊತೆಗೂಡಿ ಮಗು ಸ್ನೇಹಿ ಶಾಲೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ನಡೆಸುವುದು.
- ದ.ಕ.ಜಿಲ್ಲೆಯ 5 ತಾಲೂಕುಗಳಾದ ಮಂಗಳೂರು, ಬೆಳ್ತಂಗಡಿ, ಬಂಟ್ವಾಳ, ಪುತ್ತೂರು ಹಾಗೂ ಸುಳ್ಯಗಳಲ್ಲಿ ಡಯಟ್‌ನ ಸಿಬ್ಬಂದಿಗಳು ಈಗಾಗಲೇ ಕಾರ್ಯನಿರ್ವಹಿಸುತ್ತಿದ್ದು. ಇವರುಗಳು ಪಡಿಯ ಸಿಬ್ಬಂದಿಗಳೊಂದಿಗೆ ಜೊತೆಗೂಡಿ ಶಾಲಾ ಭೇಟಿಗೆ/ಶಾಲೆಗಳಲ್ಲಿ ಚಟುವಟಿಕೆಗಳನ್ನು ಮಾಡಲು ಸಹಕರಿಸುವುದು.
- ಡಯೆಟ್ ಸಂಸ್ಥೆಯು ಕೂಡ ಈಗಾಗಲೇ ಒಂದು ಸೂಚ್ಯಂಕಗಳನ್ನು ತಯಾರು ಮಾಡಿದ್ದು ಅದನ್ನು ಶಾಲೆಗಳಲ್ಲಿ ಮೌಲ್ಯಮಾಪನ ಮಾಡುವ ಸಂದರ್ಭದಲ್ಲಿ ಪಡಿಯು ತಯಾರು ಮಾಡಿದಂತಹ ಮಗು ಸ್ನೇಹಿ ಶಾಲೆಗೆ ಸಂಬಂಧಪಟ್ಟ ಸೂಚ್ಯಂಕಗಳನ್ನು ಕೂಡ ಪರಿಗಣನೆಗೆ ತೆಗೆದುಕೊಳ್ಳುವುದು.

ಅಲ್ಲದೆ ಜಿಲ್ಲಾ ಶಿಕ್ಷಕರ ತರಬೇತಿ ಸಂಸ್ಥೆಯ ಉಪನ್ಯಾಸಕರಾದ ಶ್ರೀಮತಿ ಆಶಾರವರು ಬಂಟ್ವಾಳ ತಾಲೂಕು, ಶ್ರೀಮತಿ ಚಂದ್ರಪ್ರಭರವರು ಮಂಗಳೂರು ತಾಲೂಕು ಹಾಗೂ ಶ್ರೀ ನಂಜುಂಡ ಸ್ವಾಮಿಯವರು ಸುಳ್ಯ ತಾಲೂಕು ಮತ್ತು ಶ್ರೀ ಎ. ಬಿ. ಕುಟಿನ್ಹೊರವರು ಬೆಳ್ತಂಗಡಿ ಮತ್ತು ಶ್ರೀಮತಿ ವೀಣಾರವರು ಪುತ್ತೂರು ತಾಲೂಕಿನ ಯೋಜನಾ ವ್ಯಾಪ್ತಿಯ ಶಾಲೆಗಳ ಮೌಲ್ಯಮಾಪನವನ್ನು ಮಾಡಿ ಈಗಾಗಲೇ ವರದಿಯನ್ನು ಪಡಿಗೆ ಸಲ್ಲಿಸಿರುತ್ತಾರೆ ಹಾಗೂ ಬಂದ ವರದಿಯ ಕ್ರೂಢೀಕರಣವನ್ನು ಮಾಡಿ ಮುಂದಿನ ಅನುಸರಣೆಗಾಗಿ ಡಯಟ್‌ನೊಂದಿಗೆ ಸಮಾಲೋಚನಾ ಸಭೆಯನ್ನು ನಡೆಸಲು ನಿರ್ಧರಿಸಲಾಗಿದೆ.



**ಪಂಚಾಯತು ಮಟ್ಟದಲ್ಲಿ ಮಕ್ಕಳ ರಕ್ಷಣಾ ಸಮಿತಿ ರಚಿಸುವ ನಿಟ್ಟಿನಲ್ಲಿ ಆರೋಗ್ಯ ಇಲಾಖೆಯೊಂದಿಗೆ ಸಹಯೋಗ:**

ಗ್ರಾಮ ಮಟ್ಟದಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆಗೆ ಇರುವ ಸಮಿತಿಗಳನ್ನು ಕ್ರೀಯಾಶೀಲಗೊಳಿಸುವ ನಿಟ್ಟಿನಲ್ಲಿ, ಸರಕಾರಿ ಸುತ್ತೋಲೆಯ ಪ್ರಕಾರ ಗ್ರಾಮ ಮಟ್ಟದಲ್ಲಿ ಮಕ್ಕಳ ರಕ್ಷಣಾ ಸಮಿತಿಯ ರಚನೆಯನ್ನು ಜಿಲ್ಲಾ ಆರೋಗ್ಯ ಇಲಾಖೆಯ ಜತೆಗಿನ ಸಹಯೋಗದೊಂದಿಗೆ ದ.ಕ ಜಿಲ್ಲೆಯ 5 ತಾಲೂಕಿನ ಯೋಜನಾ ವ್ಯಾಪ್ತಿಯ ಪ್ರಾಥಮಿಕ ಕೇಂದ್ರಗಳ ಸಹಭಾಗಿತ್ವದಲ್ಲಿ ಸಮಿತಿಯನ್ನು ರಚಿಸಿ ಅವು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವ ನಿಟ್ಟಿನಲ್ಲಿ ಪಡಿಯ ಸಿಬ್ಬಂದಿಗಳಿಗೆ ಸಹಕಾರ ನೀಡುವ ಬಗ್ಗೆ ಆರೋಗ್ಯ ಇಲಾಖೆಯು ಅನುಮತಿಯನ್ನು ನೀಡಿದೆ. ಅಲ್ಲದೆ ಈಗಾಗಲೆ ಕೆಲವು ತಾಲೂಕಿನಲ್ಲಿ ಸಮಿತಿ ಅಸ್ತಿತ್ವಕ್ಕೆ ಬಂದಿದ್ದು ಅವುಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಲ್ಲಿ ಮುಂದಿನ ಯೋಜನೆಯನ್ನು ರೂಪಿಸಬೇಕಾಗಿದೆ.

## 3. ಶಿಕ್ಷಣ ಹಕ್ಕು ಕೋಶ (ಆರ್.ಟಿ.ಇ. ಸೆಲ್)

ದುರ್ಬಲ ವರ್ಗದ ಹಾಗೂ ಪ್ರತಿಕೂಲ ಗುಂಪುಗಳಿಗೆ ಸೇರಿರುವ ಮಕ್ಕಳು ಯಾವುದೇ ಕಾರಣಕ್ಕೂ ತಾರತಮ್ಯಗಳಿಗೆ ಒಳಗಾಗದಂತೆ ಮತ್ತು ಪ್ರಾಥಮಿಕ ಶಿಕ್ಷಣವನ್ನು ಪಡೆಯುವುದರಿಂದ ಅಥವಾ ಪೂರ್ತಿಗೊಳಿಸುವುದರಿಂದ ವಂಚಿತರಾಗದಂತೆ ನೋಡಿಕೊಳ್ಳುವ ಉದ್ದೇಶದಿಂದ ಹಾಗೂ ಪೋಷಕರ ಅನುಕೂಲಕ್ಕಾಗಿ ಶಿಕ್ಷಣ ಇಲಾಖೆಯ ಸಹಕಾರದೊಂದಿಗೆ 8 ತಾಲೂಕಿನಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ನೇತೃತ್ವದಲ್ಲಿ ಶಿಕ್ಷಣ ಹಕ್ಕು ಕೋಶದ ರಚನೆಯನ್ನು ಮಾಡಿ ಶಿಕ್ಷಣ ಹಕ್ಕು ಕಾಯಿದೆಯ ಅನುಷ್ಠಾನದಲ್ಲಿ ಉದ್ಭವಿಸುವ ಸಮಸ್ಯೆಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವ ವ್ಯವಸ್ಥೆಯಾಗಿದೆ. ಶಿಕ್ಷಣ ಇಲಾಖೆ ಮತ್ತು ಸಾರ್ವಜನಿಕರ ಮಧ್ಯೆ ಸಂಪರ್ಕ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಿದೆ. ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ನೀಡುವಂತೆ ಸರಕಾರಗಳಿಗೆ ಶಿಕ್ಷಣ ಹಕ್ಕು ಕಾಯಿದೆ 2009 ಅನುಷ್ಠಾನದಲ್ಲಿ ಉದ್ಭವಿಸುವಂತಹ ಸಾರ್ವಜನಿಕ ಕುಂದುಕೊರತೆಗಳ ಕುರಿತು ಶಿಕ್ಷಣ ಹಕ್ಕು ಕೋಶವು ಪ್ರಕರಣಗಳ ಕೂಲಂಕುಷವಾಗಿ ಪರಿಶೀಲಿಸಿ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಕ್ರಮ ವಹಿಸುತ್ತಿದೆ.



**ಶಿಕ್ಷಣ ಹಕ್ಕು ಕೋಶವು ಕೈಗೊಂಡ ಪ್ರಮುಖ ಚಟುವಟಿಕೆಗಳು:**

1. ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರೊಂದಿಗೆ ಶಿಕ್ಷಣ ಹಕ್ಕು ಕೋಶದ ಕಾರ್ಯಚಟುವಟಿಕೆಯ ಕುರಿತಂತೆ ವಕಾಲತ್ತು
2. ಕ್ಷೇತ್ರ ಶಿಕ್ಷಣಾಧಿಕಾರಿಗಳೊಂದಿಗೆ ಸಮಾಲೋಚನೆ
3. ಕ್ಷೇತ್ರ ಸಮನ್ವಯಾಧಿಕಾರಿಗಳೊಂದಿಗೆ ಸಮಾಲೋಚನೆ
4. ಆರ್.ಟಿ.ಇ ಮಾಹಿತಿ ಪ್ರಸರಣಕ್ಕಾಗಿ ಕರಪತ್ರಗಳ ಮುದ್ರಣ ಮತ್ತು ವಿತರಣೆ

**5. ಶಿಕ್ಷಣ ಹಕ್ಕು ಕೋಶದ ಕುರಿತು ಅರಿವು ಕಾರ್ಯಕ್ರಮ:**

ಶಿಕ್ಷಣ ಹಕ್ಕು ಕೋಶದ ಮುಖಾಂತರ ಉಡುಪಿ ಮತ್ತು ದ.ಕ ಜಿಲ್ಲೆಯ 8 ತಾಲೂಕಿನ 17 ಕಡೆಗಳಲ್ಲಿ ಶಿಕ್ಷಣ ಇಲಾಖೆಯ ಸಹಯೋಗ ಮತ್ತು ಶಿಕ್ಷಣ ಸಂಪನ್ಮೂಲ ಕೇಂದ್ರದ ಸಹಕಾರದೊಂದಿಗೆ ಶಿಕ್ಷಣ ಹಕ್ಕು ಕಾಯಿದೆ ಮತ್ತು ಶಿಕ್ಷಣ ಹಕ್ಕು ಕೋಶದ ಕುರಿತು ಸಮುದಾಯಕ್ಕೆ ಅರಿವು ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ –2009 ಮತ್ತು ಶಿಕ್ಷಣ ಹಕ್ಕು ಕೋಶದ ಕಾರ್ಯಚಟುವಟಿಕೆಗಳ ಬಗ್ಗೆ ಜನಸಾಮಾನ್ಯರಿಗೆ ಮಾಹಿತಿಯನ್ನು ನೀಡಲಾಯಿತು.



## 4. ಸಾಮಾರ್ಥ್ಯವರ್ಧನಾ ತರಬೇತಿ ಶಿಬಿರ:

ಪಡಿ ಸಂಸ್ಥೆಯ ಒಂದು ಮುಖ್ಯ ಉದ್ದೇಶಗಳಲ್ಲಿ ಒಂದಾದ ಶಿಕ್ಷಣ ಸಂಪನ್ಮೂಲ ಕೇಂದ್ರದ ಕಾರ್ಯಕಾರಿಣಿ ಸದಸ್ಯರಿಗೆ ಅವರ ಸಾಮಾರ್ಥ್ಯವನ್ನು ಹೆಚ್ಚಿಸಲು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಕಳೆದ ಹಲವಾರು ವರ್ಷಗಳಲ್ಲಿ ಮಕ್ಕಳ ಹಕ್ಕುಗಳು ಮತ್ತು ಮೌಲ್ಯಯುತ ಶಿಕ್ಷಣಕ್ಕಾಗಿ ಕಾರ್ಯನಿರ್ವಹಿಸುತ್ತಿರುವ ಸಮುದಾಯಾಧಾರಿತ ಶಿಕ್ಷಣ ಸಂಪನ್ಮೂಲ ಕೇಂದ್ರಗಳು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಕಾರ್ಯಕಾರಿಣಿ ಸದಸ್ಯರಿಗೆ ತರಬೇತಿ ಅಗತ್ಯವನ್ನು ಮನಗಂಡು ಅವರಿಗೆ ಆಡಳಿತಾತ್ಮಕ, ಸಮುದಾಯ ಭಾಗವಹಿಸುವಿಕೆ ಮತ್ತು ಪಡಿಯ ಮಗು ಸ್ನೇಹಿ ಪರಿಕಲ್ಪನೆ ಸಾಕಾರಕ್ಕಾಗಿ ಪಾಲ್ಗೊಳ್ಳುವ ಬಗ್ಗೆ ಮತ್ತು ಶಿಕ್ಷಣ ಸಂಪನ್ಮೂಲ ಕೇಂದ್ರಗಳು ಸುಗಮವಾಗಿ ಕಾರ್ಯನಿರ್ವಹಿಸುವುದರ ಕುರಿತು ತರಬೇತಿಯನ್ನು ನೀಡಲಾಗಿದೆ. ಉಡುಪಿ ಮತ್ತು ದ.ಕ ಜಿಲ್ಲೆಯ 8 ತಾಲೂಕುಗಳಲ್ಲಿ ಪಡಿಯ ತರಬೇತಿ ವಿಭಾಗವು ತರಬೇತಿಯನ್ನು ನೀಡಿದೆ.



ತರಬೇತಿಯಲ್ಲಿ ಪ್ರತಿ ಕಾರ್ಯಕಾರಿಣಿ ಸದಸ್ಯರ ಕಾರ್ಯವ್ಯಾಪ್ತಿ ಮತ್ತು ಜವಾಬ್ದಾರಿಗಳು, ಅಧಿ–ನಿಯಮಗಳ ಬಗ್ಗೆ ತರಬೇತಿಯ ಜೊತೆ ಶಿಕ್ಷಣ ಸಂಪನ್ಮೂಲ ಕೇಂದ್ರಗಳು ಎದುರಿಸುತ್ತಿರುವ ಸವಾಲುಗಳು ಮತ್ತು ಅವುಗಳಿಗೆ ಲಭ್ಯವಿರುವ ಸಂಪನ್ಮೂಲವನ್ನು ಉಪಯೋಗಿಸಿ ಹೇಗೆ ಪರಿಹರಿಸುವ ಕುರಿತು ವಿಸ್ತೃತವಾದ ಚರ್ಚೆಯೊಂದಿಗೆ ಮುಂದಿನ ಯೋಜನೆಗಳನ್ನು ಮತ್ತು ಈ ಯೋಜನೆಗಳನ್ನು ಸಮುದಾಯಕ್ಕೆ ತಲುಪಿಸುವುದರ ಜೊತೆಗೆ ಸಮದಾಯದ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಕುರಿತು ಸಮಾಲೋಚನೆಯನ್ನು ತರಬೇತಿಯಲ್ಲಿ ನಡೆಸಲಾಯಿತು.

**ಉಡುಪಿ ಜಿಲ್ಲೆಯ ಕುಂದಾಪುರ, ಕಾರ್ಕಳ ಮತ್ತು ಉಡುಪಿ ಮತ್ತು ದ.ಕ ಜಿಲ್ಲೆಯ ಪುತ್ತೂರು, ಮಂಗಳೂರು, ಬಂಟ್ವಾಳ, ಸುಳ್ಯ ಮತ್ತು ಬೆಳ್ತಂಗಡಿ ತಾಲೂಕುಗಳಲ್ಲಿ ನಡೆದ ಸಾಮಾರ್ಥ್ಯವರ್ಧನಾ ತರಬೇತಿ ಕಾರ್ಯಾಗಾರದಲ್ಲಿ ಚರ್ಚಿಸಲಾದ ಪ್ರಮುಖ ವಿಷಯಗಳು:**

- ಶಿಕ್ಷಣ ಸಂಪನ್ಮೂಲ ಕೇಂದ್ರದ ಆಡಳಿತಾತ್ಮಕ ಸಬಲೀಕರಣ
- ಕಾರ್ಯಕಾರಿ ಸಮಿತಿಯವರಿಗೆ ಮಗು ಸ್ನೇಹಿ ಶಾಲಾ, ಪಂಚಾಯತ್, ಶಿಕ್ಷಣ ಹಕ್ಕು ಕೋಶದ ಪರಿಕಲ್ಪನೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದು, ಮಹತ್ವ ಆಡಳಿತ, ಜವಾಬ್ದಾರಿ ಹಾಗೂ ಪರೀಶೀಲನಾ ಪಟ್ಟಿ ಬಗ್ಗೆ ಚರ್ಚೆ.
- ಮಕ್ಕಳ ಹಕ್ಕುಗಳ ಉಲ್ಲಂಘನೆ ಆದಾಗ ಏನು ಮಾಡುವುದು
- ಗ್ರಾಮ ಸಭೆಯಲ್ಲಿ ಮಕ್ಕಳ ಭಾಗವಹಿಸುವಿಕೆಯನ್ನು ಪರಿಣಾಮಕಾರಿಯಾಗಿಸುವುದು ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳ ಬಗ್ಗೆ ಪಂಚಾಯತ್ ಪಾತ್ರ, ಶಾಲೆಯ ಅಭಿವೃದ್ಧಿಯಲ್ಲಿ ಪಂಚಾಯತ್ ಸದಸ್ಯರ ಭಾಗವಹಿಸುವಿಕೆ
- ಲಿಂಗತಾರತಮ್ಯ ಮತ್ತು ಬಾಲಾಪರಾಧ ಮನೋಭಾವನೆ
- ಶಾಲೆಯಿಂದ ಹೊರಗುಳಿದ ಮಕ್ಕಳ ಮನೆ ಭೇಟಿ ಮಾಡಿ ಮನವೊಲಿಸಿ ಮರು ದಾಖಲೆ ಮಾಡುವ ಬಗ್ಗೆ
- ಶಿಕ್ಷಣ ಹಕ್ಕು ಕೋಶದ ಗೊಂದಲದ ಬಗ್ಗೆ ಮತ್ತು ಮಗು ಸ್ನೇಹಿ ಶಾಲೆಯ ಪರಿಕಲ್ಪನೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದು
- ಮಗು ಸ್ನೇಹಿ ಪಂಚಾಯತ್‌ನಲ್ಲಿ ತೊಡಗಿಸಿಕೊಳ್ಳುವುದು ಮತ್ತು ಗ್ರಾಮ ಪಂಚಾಯತ್‌ನ ಗ್ರಂಥಾಲಯದ ಮಹತ್ವ
- ಮಕ್ಕಳ ಹಕ್ಕು & ಮೀನಾ ಸಂಘದ ಮಹತ್ವ
- ಎಸ್.ಡಿ.ಎಮ್.ಸಿ ಸಬಲೀಕರಣ ಮತ್ತು ಶಾಲೆಯ ಅಭಿವೃದ್ಧಿಯಲ್ಲಿ ಸ್ಥಳೀಯ ಸರಕಾರದ ಜವಾಬ್ದಾರಿ

**ಕಾರ್ಯಗತಗೊಳಿಸಲು ನಿರ್ಣಯಿಸಲಾಗಿರುವ ಮುಂದಿನ ಯೋಜನೆ:**

- ಎಸ್.ಡಿ.ಎಮ್.ಸಿಯ ನಿರ್ಣಯಗಳನ್ನು ಪಂಚಾಯತ್‌ಗೆ ಕಳಿಸುವ ಕುರಿತಂತೆ ಬಲವರ್ಧನೆ
- ಮಕ್ಕಳ ಗ್ರಾಮ ಸಭೆಯು ನಿರಂತರವಾಗಿ ಪರಿಣಾಮಕಾರಿಯಾಗಿ ನಡೆಸುವುದು
- ಪಂಚಾಯತ್‌ನ ಗ್ರಂಥಾಲಯವು ಮಕ್ಕಳಿಗೆ ಸದುಪಯೋಗವಾಗುವಂತೆ ಮಾಡುವುದು
- ಸುರಕ್ಷಾ ಸಮಿತಿಯ ರಚನೆ ಹಾಗೂ ಕಾರ್ಯ ನಿರ್ವಹಣೆ
- ಪಂಚಾಯತ್‌ನಲ್ಲಿ ಶಿಕ್ಷಣ ಹಕ್ಕು ಕಾಯ್ದೆಯ ಬಗ್ಗೆ ಅರಿವು
- ಬಿಸಿಯೂಟ, ಅಡಿಗೆ ಸಾಮಾಗ್ರಿ ಬಗ್ಗೆ ಎಸ್.ಡಿ.ಎಮ್.ಸಿ ಮತ್ತು ಪಂಚಾಯತುಗಳ ಮೇಲುಸ್ತುವಾರಿಕೆ
- ಶಿಕ್ಷೆ ರಹಿತ ಬೋಧನೆಗೆ ಪ್ರೋತ್ಸಾಹ ಮತ್ತು ಮಕ್ಕಳು ದೈಹಿಕ, ಮಾನಸಿಕ ಕಿರುಕುಳದಿಂದ ಮುಕ್ತರಾಗುವಂತೆ ಮಾಡುವಲ್ಲಿನ ಪ್ರಯತ್ನಗಳು.

**ಮಗು ಸ್ನೇಹಿ ಶಾಲಾ ವಾತವರಣದ ನಿರ್ಮಾಣಕ್ಕಾಗಿ ಶಿಕ್ಷಣ ಸಂಪನ್ಮೂಲ ಕೇಂದ್ರದ ಸದಸ್ಯರ ಸಹಭಾಗಿತ್ವದೊಂದಿಗೆ ನಡೆಸಲಾದ ಇತರ ಕಾರ್ಯಕ್ರಮಗಳು**

- ಮಕ್ಕಳ ಸಂಸತ್ತು ಕಾರ್ಯಕ್ರಮದ ಸಂಘಟನೆ ಮತ್ತು ಆಯೋಜನೆ
- ಮಗು ಸ್ನೇಹಿ ಶಾಲೆ ಸಮುದಾಯ ಅರಿವು ಕಾರ್ಯಕ್ರಮ, ಶಿಕ್ಷಣ ಹಕ್ಕು ಕೋಶ ಅರಿವು ಕಾರ್ಯಕ್ರಮದ ಆಯೋಜನೆ.
- ತಾಲೂಕು ಮಟ್ಟದ ಎಸ್.ಡಿ.ಎಮ್.ಸಿ ಸಮಾವೇಶ
- ಮನೆಕೆಲಸದ ಕುರಿತಂತೆ ನಡೆಯುವ ಅಧ್ಯಯನದ ಮಾಹಿತಿ ಸಂಗ್ರಹಣೆ.
- ಶಿಕ್ಷಣ ಹಕ್ಕು ಕಾಯಿದೆಯ ವಸ್ತುಸ್ಥಿತಿಯ ಕುರಿತಂತೆ ಶಾಲೆಗಳಲ್ಲಿ ಮಾಹಿತಿ ಸಂಗ್ರಹಣೆ
- ಮೀನಾ ಮತ್ತು ಮಕ್ಕಳ ಹಕ್ಕುಗಳ ಕ್ಲಬ್‌ನ ಸದಸ್ಯರಿಗೆ ತರಬೇತಿ ಕಾರ್ಯಕ್ರಮ

## 5. ವಿವಿಧ ತರಬೇತಿ ಕೈಪಿಡಿ ರಚನೆಯ ಕುರಿತಂತೆ ನಡೆಸಿದ ಕಾರ್ಯಾಗಾರಗಳು:

**ಅ. ಅರ್.ಟಿ.ಇ ತರಬೇತಿ ಕೈಪಿಡಿ:**

ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ 2009ರ ಕೈಪಿಡಿ ತಯಾರಿಗಾಗಿ ಒಂದು ದಿನದ ಕಾರ್ಯಾಗಾರದಲ್ಲಿ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮತ್ತು ಸಂಘ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದು ಈ ಕೈಪಿಡಿಯು ತಳಮಟ್ಟದಲ್ಲಿರುವ ಸಮುದಾಯ ಮತ್ತು ಸರಕಾರಿ ಇಲಾಖೆಯ ಅಧಿಕಾರಿಗಳಿಗೂ ಪ್ರಯೋಜನ ಆಗುವಂತೆ ನುರಿತ ವಿಷಯ ತಜ್ಞರಿಂದ ಮಾಹಿತಿ ಮತ್ತು ಸಲಹೆಯನ್ನು ಪಡೆದು ರಚಿಸಲಾಗಿರುತ್ತದೆ. ಈ ಕೈಪಿಡಿಯ ರೂಪುರೇಷೆಗಳನ್ನು ತಯಾರಿಸಿ ಜವಾಬ್ದಾರಿಯನ್ನು ವಿಷಯ ತಜ್ಞರಿಗೆ ನೀಡಿ ಕೈಪಿಡಿಯು ಅಂತಿಮೀಕರಣಗೊಂಡು ಮುದ್ರಣ ಹಂತದಲ್ಲಿದೆ.




**ಆ. ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯಿದೆ 2005:**

ಕುರಿತಂತೆ ತರಬೇತಿ ಕೈಪಿಡಿಯ ರಚಿಸುವಲ್ಲಿ ಒಂದು ದಿನದ ಕಾರ್ಯಾಗಾರವನ್ನು ಪಡಿ ಸಂಸ್ಥೆಯಲ್ಲಿ ನಡೆಸಲಾಯಿತು. ಈ ಕಾಯಾಗಾರದಲ್ಲಿ ಸಂಸ್ಥೆಯ ನಿರ್ದೇಶಕರಾದ ರೆನ್ನಿ ಡಿಸೋಜರವರು ಪ್ರಾಸ್ತವಿಕ ಮಾತುಗಳನ್ನಾಡುತ್ತಾ ಈ ತರಬೇತಿ ಕೈಪಿಡಿಯು ಸಂಪನ್ಮೂಲ ವ್ಯಕ್ತಿಗಳಿಗೆ ಬಳಕೆಯಾಗುವಂತೆ ಹಾಗೂ ತಳಮಟ್ಟದ ಜನರಿಗೆ ಅರಿವು ಮೂಡಿಸುವ ಉದ್ದೇಶದಿಂದ ಹೊರತರಲು ನಿರ್ಧರಿಸಲಾಗಿದೆ ಎಂಬುದಾಗಿ ತಿಳಿಸಿದರು. ಈ ಕಾರ್ಯಾಗಾರಕ್ಕೆ ಬೇರೆ ಬೇರೆ ಇಲಾಖೆ ಮತ್ತು ಸ್ವಯಂ ಸೇವಾ ಸಂಸ್ಥೆಗಳ ನುರಿತ ವಿಷಯ ತಜ್ಞರು ಭಾಗವಹಿಸಿದ್ದು ಈ ಕೈಪಿಡಿಗೆ ರೂಪುರೇಷೆಯನ್ನು ನೀಡುವುದರೊಂದಿಗೆ ಕರಡು ಪ್ರತಿಯನ್ನು ರಚನೆ ಮಾಡಲಾಯಿತು.



**ಇ. ಬಾಲ ನ್ಯಾಯ ಕಾಯಿದೆ (ಜೆ. ಜೆ ಕಾಯಿದೆ) ತರಬೇತಿ ಕೈಪಿಡಿ :**

ಪಡಿ ಸಂಸ್ಥೆಯು ಮಕ್ಕಳ ಹಕ್ಕುಗಳ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸುವುದರಿಂದ ಮತ್ತು ಜನಸಮುದಾಯಕ್ಕೆ ಮಾಹಿತಿಯ ಅನಿವಾರ್ಯತೆಯ ಮತ್ತು ಶಿಕ್ಷಣ ಸಂಪನ್ಮೂಲ ಕೇಂದ್ರದ ಸದಸ್ಯರಿಂದ ಮಕ್ಕಳ ನ್ಯಾಯ ಕಾಯಿದೆ ಕುರಿತಂತೆ ಅರಿವಿನ ಅಗತ್ಯತೆಯ ಬಗ್ಗೆ ಬೇಡಿಕೆ ಬಂದದ್ದರಿಂದ ಜೆ.ಜೆ ಕಾಯಿದೆಯ ತರಬೇತಿ ನೀಡುವಲ್ಲಿ ಮತ್ತು ಕೈಪಿಡಿಯ ರಚನೆಯ ಕುರಿತು ನಿರ್ಧರಿಸಲಾಗಿದ್ದು ಈ ಕುರಿತು ಒಂದು ದಿನದ ಕೈಪಿಡಿ ರಚನಾ ಕಾರ್ಯಾಗಾರವನ್ನು ಹಮ್ಮಿಕೊಂಡಿದ್ದು, ಮಕ್ಕಳ ಜತೆಗೆ ಕೆಲಸ ಮಾಡುವ ಪೋಲಿಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕಾರ್ಮಿಕ ಇಲಾಖೆ, ಶಿಶು ಅಬಿವೃದ್ಧಿ ಯೋಜನ ಇಲಾಖೆ ಮತ್ತು ಸರಕಾರೇತರ ಸಂಘ ಸಂಸ್ಥೆಗಳು, ಮಕ್ಕಳ ಸಹಾಯವಾಣಿ, ಜಿಲ್ಲಾ ಮಕ್ಕಳ ಸಮಗ್ರ ರಕ್ಷಣಾ ಘಟಕ, ಮಕ್ಕಳ ಕಲ್ಯಾಣ ಸಮಿತಿ , ಬಾಲ ನ್ಯಾಯ ಮಂಡಳಿ, ಯುನಿಸೆಫ್‌ನ ಪ್ರತಿನಿಧಿ, ಶಿಕ್ಷಣ ಇಲಾಖೆ, ಸಹಭಾಗಿತ್ವದಲ್ಲಿ ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಿ ತರಬೇತಿದಾರರು ಎಲ್ಲಾ ವರ್ಗಕ್ಕೂ ತರಬೇತಿ ನೀಡಲು ಪೂರಕವಾಗುವಂತೆ ಕೈಪಿಡಿಯನ್ನು ರಚಿಸುವ ನಿಟ್ಟಿನಲ್ಲಿ ಮತ್ತು ಕೈಪಿಡಿಯು ಒಳಗೊಳ್ಳಬಹುದಾದ ವಿಷಯಗಳ ಬಗ್ಗೆ ದೀರ್ಘವಾದ ಚರ್ಚೆಯ ನಂತರ ಕಾಯಿದೆಯಲ್ಲಿ ಉಲ್ಲೇಖಿಸಿದ ಅಂಶಗಳೊಂದಿಗೆ ಇತರ ಅಂಶಗಳನ್ನು ಸೇರಿಸಿ ಅಧ್ಯಾಯಗಳನ್ನು ರಚಿಸಲಾಯಿತು.



## 6. ತರಬೇತುದಾರರ ತರಬೇತಿ:

ಶಿಕ್ಷಣ ಸಂಪನ್ಮೂಲ ಕೇಂದ್ರದ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿ ನೀಡಿ ವಿಷಯಗಳ ಮೇಲೆ ಪರಿಣಿತರನ್ನಾಗಿ ಮಾಡಿ ತಳಮಟ್ಟದಲ್ಲಿ ಮಾಹಿತಿ ಪಸರಿಸುವ ಉದ್ದೇಶದೊಂದಿಗೆ ಪಡಿಯು ತನ್ನ ಈ ಯೋಜನೆಯಲ್ಲಿ 5 ವಿಷಯಗಳಲ್ಲಿ ತರಬೇತಿ ನೀಡಿ ಸಂಪನ್ಮೂಲ ವ್ಯಕ್ತಿಗಳ ತಂಡವನ್ನು ರೂಪಿಸುವುದರೊಂದಿಗೆ ಶಿಕ್ಷಣ ಕ್ಷೇತ್ರ ಮತ್ತು ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿ ಒಂದು ವ್ಯವಸ್ಥೆಯು ಸದಾ ಜಾಗೃತವಾಗಿರುವಂತೆ ಮಾಡುವುದು ಇದರ ಮುಖ್ಯ ಉದ್ದೇಶವಾಗಿದೆ. ಕಳೆದ ವರ್ಷದಲ್ಲಿ ಲಿಂಗತ್ವ ಮತ್ತು ಪೋಕ್ಸೋ ಕುರಿತಂತೆ ತರಬೇತಿಯನ್ನು ನೀಡಲಾಗಿದ್ದು ಮುಂದಿನ ಭಾಗವಾಗಿ ಶಿಕ್ಷಣ ಹಕ್ಕು ಕಾಯಿದೆ 2009, ಕೌಟುಂಬಿಕ ದೌರ್ಜನ್ಯ, ಜೆ.ಜೆ ಕಾಯಿದೆ ಕುರಿತಂತೆ ತರಬೇತಿದಾರರಿಗೆ ಉಡುಪಿ ಮತ್ತು ದ.ಕ ಜಿಲ್ಲೆಯ ತರಬೇತುದಾರರಿಗೆ ಪ್ರತ್ಯೇಕ ತರಬೇತಿಯನ್ನು ಆಯೋಜನೆ ಮಾಡಲಾಗಿದೆ.

**ಅ. ಅರ್.ಟಿ.ಇ ತರಬೇತಿ**

ದಿನಾಂಕ 20.06.2915ರಂದು ಅರ್.ಟಿ.ಇ ವಿಷಯದಲ್ಲಿ ತರಬೇತಿಯನ್ನು ಸಂಪನ್ಮೂಲ ವ್ಯಕ್ತಿಗಳಿಗೆ ಬಂಟ್ವಾಳ ತಾಲೂಕಿನ ಕ್ಷೇತ್ರ ಸಮನ್ವಯಾಧಿಕಾರಿಗಳ ಸಭಾಂಗಣದಲ್ಲಿ ಆಯೋಜಿಸಲಾಗಿದ್ದು ಸಂಪನ್ಮೂಲ ವ್ಯಕ್ತಿಯಾಗಿ ರೆನ್ನಿ ಡಿ'ಸೋಜರವರು ತರಬೇತಿ ನೀಡಿದ್ದು ಮಂಗಳೂರು, ಬಂಟ್ವಾಳ, ಪುತ್ತೂರು, ಸುಳ್ಯ ತಾಲೂಕಿನ ಸುಮಾರು 30 ಮಂದಿ ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಿದ್ದರು ಮತ್ತು ಉಡುಪಿ ಜಿಲ್ಲೆಯಲ್ಲಿ ದಿನಾಂಕ 13.06.2015ರಂದು ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಉಚಿತ ಮತ್ತು ಕಡ್ಡಾಯ ಹಕ್ಕು ಕಾಯಿದೆ 2009ರ ಒಟ್ಟು 7 ಅಧ್ಯಾಯಗಳ ವಿಷಯ ಮಂಡನೆ ಮತ್ತು ಗುಂಪು ಚಟುವಟಿಕೆಯ ಮೂಲಕ ತರಬೇತಿಯನ್ನು ನೀಡಲಾಗಿರುತ್ತದೆ. ಆರ್.ಟಿ.ಇ.ಯ ಪರಿಣಾಮಕಾರಿ ಅನುಷ್ಠಾನದಲ್ಲಿ ಒಂದಷ್ಟು ಗೊಂದಲವನ್ನು ನಿವಾರಿಸುವಲ್ಲಿ ಮತ್ತು ಪ್ರಸ್ತುತ ಪರಿಸ್ಥಿಯ ಮಾಹಿತಿಯನ್ನು ನೀಡುವಲ್ಲಿ ಶಿಕ್ಷಣ ಇಲಾಖೆಯ ಅಧಿಕಾರಿಯಾದ ಕ್ಷೇತ್ರ ಸಂಪನ್ಮೂಲ ವ್ಯಕ್ತಿಯಾದ ಶ್ರೀಮತಿ ಸುಜಾತ ಇವರು ಮಾಹಿತಿಯನ್ನು ನೀಡಿದ್ದು ಪ್ರಸ್ತುತ ವಿದ್ಯಾಮಾನಗಳ ಬಗ್ಗೆ ಅವಲೋಕನ ಮಾಡಲಾಯಿತು.

**ಆ. ಬಾಲ ನ್ಯಾಯ ಕಾಯಿದೆ (ಜೆ. ಜೆ. ಕಾಯಿದೆ) ತರಬೇತಿ**

ದಿನಾಂಕ 30.09.2015 ದ.ಕ ಜಿಲ್ಲೆಯ ಕ್ಷೇತ್ರ ಸಮನ್ವಯಾಧಿಕಾರಿಗಳ ಕಛೇರಿ ಮತ್ತು ಉಡುಪಿಯಲ್ಲಿ ದಿನಾಂಕ 24.09.2015ರಂದು ಉಡುಪಿಯ ಶಿಕ್ಷಣ ಸಂಪನ್ಮೂಲ ಕೇಂದ್ರದ ಕಛೇರಿಯಲ್ಲಿ ಜೆ. ಜೆ. ಕಾಯಿದೆಯ ಕುರಿತು ಮಾಹಿತಿಯನ್ನು ನೀಡಲಾಯಿತು. ತರಬೇತುದಾರರಾದ ಜೆ. ಪ್ರಮೀಳಾ ವಾಜ್‌ರವರು ತರಬೇತಿಯನ್ನು ನಡೆಸಿ ಕೊಟ್ಟಿದ್ದು 60 ಮಂದಿ ಸಂಪನ್ಮೂಲ ವ್ಯಕ್ತಿಗಳ ಭಾಗವಹಿಸಿದ್ದರು.



ತರಬೇತಿಯ ಮುಖ್ಯ ಭಾಗವಾಗಿ ಮಕ್ಕಳ ಪ್ರಸ್ತುತ ಸ್ಥಿತಿಗತಿಯನ್ನು ಗುಂಪು ಚರ್ಚೆಯ ಮೂಲಕ ಚರ್ಚಿಸಿ ಕಾಯಿದೆಯಲ್ಲಿ ಮಕ್ಕಳ ರಕ್ಷಣೆ ಮತ್ತು ಆರೈಕೆ ಮತ್ತು ಪುನರ್ವಸತಿಯ ಹಾಗೂ ಮಕ್ಕಳ ರಕ್ಷಣಾ ವ್ಯವಸ್ಥೆಗಳ ಬಗ್ಗೆ ಮಾಹಿತಿ ನೀಡುವುದರೊಂದಿಗೆ ಬಾಲ ನ್ಯಾಯ ಕಾಯಿದೆ ಅಧ್ಯಾಯಗಳನ್ನು ವಿವರಿಸಲಾಯಿತು ಅಲ್ಲದೆ ಈ ಕಾಯಿದೆಯನ್ನು ಪರಿಣಾಮಕಾರಿ ಅನುಷ್ಠಾನಗೊಳಿಸುವಲ್ಲಿ ಇಲಾಖೆ ಮತ್ತು ಸ್ವಯಂ ಸೇವಾ ಸಂಸ್ಥೆಗಳು ಮತ್ತು ಜನ ಸಾಮಾನ್ಯರ ಕರ್ತವ್ಯಗಳನ್ನು ವಿವರಿಸಲಾಯಿತು ಮತ್ತು ಮಕ್ಕಳ ರಕ್ಷಣೆಯಲ್ಲಿ ಬೇರೆ ಬೇರೆ ಇಲಾಖೆ ಮತ್ತು ಸಮುದಾಯದ ಒಂದಷ್ಟು ಜವಾಬ್ದಾರಿಗಳು ಮತ್ತು ವಕಾಲತ್ತು ಪ್ರಕ್ರಿಯೆಗಳ ಹಂತಗಳ ಬಗ್ಗೆ ವಿವರಿಸಲಾಯಿತು.

ಈ ತರಬೇತಿಯನ್ನು ತಳಮಟ್ಟದ ಸಮುದಾಯಕ್ಕೆ ತಲುಪಿಸುವಲ್ಲಿ ಕ್ರಿಯಾ ಯೋಜನೆಯನ್ನು ತಯಾರಿಸಿ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿ ನೀಡುವಲ್ಲಿ ಮಾರ್ಗದರ್ಶನ ನೀಡಲಾಯಿತು.

**ಇ. ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ 2005 :**

ಈ ಮೇಲಿನ ವಿಷಯದಲ್ಲಿ ಉಡುಪಿಯಲ್ಲಿ ದಿನಾಂಕ 15.02.2016 ರಂದು ಶಿಕ್ಷಣ ಸಂಪನ್ಮೂಲ ಕೇಂದ್ರದ ಕಛೇರಿಯಲ್ಲಿ ಹಾಗೂ ದ.ಕ ಜಿಲ್ಲೆಯಲ್ಲಿನ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿಯನ್ನು ದಿನಾಂಕ 16.02.2016ರಂದು ಬಂಟ್ವಾಳ ತಾಲೂಕಿನ ಕ್ಷೇತ್ರ ಸಮನ್ವಯಾಧಿಕಾರಿಗಳ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ಕೌಟುಂಬಿಕ ಹಿಂಸೆ ಒಂದು ಮಾನವ ಹಕ್ಕಿನ ಉಲ್ಲಂಘನೆ, ಕೌಟುಂಬಿಕ ಹಿಂಸೆಯ ಸ್ವರೂಪ, ಪರಿಣಾಮಗಳನ್ನು ತಿಳಿಸುತ್ತಾ ಅದಕ್ಕೆ ಸಂಬಂದಿಸಿದ ಕಾನೂನಿನ ಅರಿವು ಮೂಡಿಸುವುದು, ಕೌಟುಂಬಿಕ ಹಿಂಸೆಯ ವಿರುದ್ಧ ಮಹಿಳೆಯರಿಗೆ ರಕ್ಷಣಾ ಕಾಯಿದೆ 2005 ಮತ್ತು ನಿಯಮ 2006 ಕೌಟುಂಬಿಕ ಹಿಂಸೆಯ ಬಗ್ಗೆ ಇರುವ ಮಿಥ್ಯೆ ಮತ್ತು ರಕ್ಷಣಾ ವ್ಯವಸ್ಥೆಗಳ ಬಗ್ಗೆ ಮಾಹಿತಿಯನ್ನು ನೀಡಲಾಯಿತು ಅಲ್ಲದೆ ವಿವಿಧ ಗುಂಪುಗಳಿಗೆ ತರಬೇತಿ ನೀಡುವಾಗ ಗಮನಿಸಬೇಕಾದ ಅಂಶಗಳ ಕುರಿತು ಮತ್ತು ಒಂದು ಉತ್ತಮ ತರಬೇತಿದಾರನಲ್ಲಿ ಇರಬಹುದಾದ ಗುಣಲಕ್ಷಣಗಳ ಬಗ್ಗೆ ಸವಿವರವಾಗಿ ಸಂಪನ್ಮೂಲ ವ್ಯಕ್ತಿಗಳು ತರಬೇತಿ ನೀಡಿದರು.

## 7. ಫೆಲೋಶಿಪ್ ಕಾರ್ಯಕ್ರಮ:

ಶಿಕ್ಷಣ ಸಂಪನ್ಮೂಲದ ಪರಿಕಲ್ಪನೆಯನ್ನು ಸಮುದಾಯಕ್ಕೆ ಪಸರಿಸುವ ಉದ್ದೇಶದಿಂದ ಮತ್ತು ಶಿಕ್ಷಣ ಸಂಪನ್ಮೂಲ ಕೇಂದ್ರಕ್ಕೆ ಸದಸ್ಯತನವನ್ನು ಹೆಚ್ಚಿಸುವ ಭಾಗವಾಗಿ ಮತ್ತು ಸಮುದಾಯಕ್ಕೆ ವಿವಿಧ ವಿಷಯಗಳ ಮೇಲೆ ಜನಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಉಡುಪಿ ಮತ್ತು ದ.ಕ ಜಿಲ್ಲೆಯ 8 ತಾಲೂಕಿನ ಶಿಕ್ಷಣ ಸಂಪನ್ಮೂಲ ಕೇಂದ್ರದ ಸಹಕಾರದೊಂದಿಗೆ ಸುಮಾರು 20 ಸ್ಥಳಗಳಲ್ಲಿ ಫೆಲೋಶಿಪ್ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು ಈ ಕಾರ್ಯಕ್ರಮದಲ್ಲಿ ಮಹಿಳಾ ದೌರ್ಜನ್ಯ ಹಾಗೂ ಮಹಿಳಾ ಕಾನೂನು, ಆರ್.ಟಿ.ಇ, ಫೋಕ್ಸೋ ಕಾಯಿದೆ, ಮಕ್ಕಳ ಹಕ್ಕುಗಳು, ಲಿಂಗ ಸಮಾನತೆ, ಮಕ್ಕಳ ಸುರಕ್ಷತೆ, ಮಕ್ಕಳ ರಕ್ಷಣಾ ವ್ಯವಸ್ಥೆಗಳು,




ಎಸ್.ಡಿ.ಎಂ.ಸಿ, ಪಡಿಯ ಪರಿಕಲ್ಪನೆಯಾದ ಮಗುಸ್ನೇಹಿ ಶಾಲಾ ವಾತವರಣ, ಶಿಕ್ಷಣ ಸಂಪನ್ಮೂಲ ಕೇಂದ್ರದ ಧ್ಯೇಯೋದ್ದೇಶಗಳು ಮತ್ತು ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಲಾಯಿತು.

ಸ್ತ್ರೀ ಶಕ್ತಿ, ಸ್ವಸಹಾಯ ಗುಂಪು, ಯುವಕ/ ಯುವತಿ ಮಂಡಳ, ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಪಂಚಾಯತು ಸದಸ್ಯರು, ಎಸ್.ಡಿ.ಎಮ್.ಸಿ ಸದಸ್ಯರು ಭಾಗವಹಿಸಿದ್ದು ಸಂಪನ್ಮೂಲ ಕೇಂದ್ರದ ಸದಸ್ಯರಾಗಿ ಮತ್ತು ಶಿಕ್ಷಣ ಕ್ಷೇತ್ರದಲ್ಲಿನ ಅಮೂಲಾಗ್ರ ಬದಲಾವಣೆ ತಮ್ಮ ಕೊಡುಗೆ ನೀಡುವಲ್ಲಿ ಉತ್ಸುಕತೆಯನ್ನು ತೋರಿದ್ದಾರೆ. ಅಲ್ಲದೇ ಪಡಿಯು ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿಯನ್ನು ನೀಡಿ ಅವರೆ ಸಂಪನ್ಮೂಲ ವ್ಯಕ್ತಿಯಾಗಿ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿರುತ್ತಾರೆ. ಅಲ್ಲದೆ ಶಿಕ್ಷಣ ಸಂಪನ್ಮೂಲ ಕೇಂದ್ರದ ಪರಿಕಲ್ಪನೆಯನ್ನು ಇತರ ಕ್ಷೇತ್ರಗಳಿಗೂ ಪಸರಿಸಿ ಸಮುದಾಯವನ್ನು ಒಳಗೊಳ್ಳುವಂತೆ ಮಾಡುವುದರೊಂದಿಗೆ ಶಿಕ್ಷಣ ವ್ಯವಸ್ಥೆಯಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಗೆ ಪ್ರೇರೇಪಣೆ ಮಾಡುವಲ್ಲಿ ಈ ಕಾರ್ಯಕ್ರಮವು ಯಶಸ್ವಿಯಾಗಿದೆ. ಸಮುದಾಯದಲ್ಲಿ ಮಹಿಳೆಯರಿಗೆ ಆಗುವ ತೊಂದರೆ ಮತ್ತು ದೌರ್ಜನ್ಯಕ್ಕೆ ಸಂಬಂಧಿಸಿದಂತೆ ಕೆಲವು ಪ್ರಕರಣಗಳು ಬೆಳಕಿಗೆ ಬಂದಿದ್ದು ಅವುಗಳನ್ನು ಸೂಕ್ತ ಪ್ರಾಧಿಕಾರಗಳಿಗೆ ತಲುಪಿಸುವ ಕಾರ್ಯವನ್ನು ಶಿಕ್ಷಣ ಸಂಪನ್ಮೂಲ ಕೇಂದ್ರಗಳು ಯಶಸ್ವಿಯಾಗಿ ಮಾಡಿವೆ.


ಮಕ್ಕಳ ಪೋಷಕರೊಂದಿಗೆ ಸಮಾಲೋಚನೆ

## 8. ರಾಜ್ಯ ಮಟ್ಟದ ವಕಾಲತ್ತು ಮತ್ತು ಆರ್.ಟಿ.ಇ ವಸ್ತು ಸ್ಥಿತಿಗಳ ಸಮೀಕ್ಷೆ ಮತ್ತು ಮಗು ಸ್ನೇಹಿ ಪರಿಕಲ್ಪನೆಯನ್ನು ರಾಜ್ಯ ಮಟ್ಟಕ್ಕೆ ವಿಸ್ತರಣೆ:

**ಸಮಾಲೋಚನಾ ಸಭೆಗಳು:**

- 16 ಜಿಲ್ಲೆಯ ಪ್ರತಿನಿಧಿಗಳೊಂದಿಗೆ ಮಗು ಸ್ನೇಹಿ ಪರಿಕಲ್ಪನೆ ಹಾಗೂ ಅರ್.ಟಿ.ಇ ವಸ್ತು ಸ್ಥಿತಿಯ ಕುರಿತಂತೆ ಸಮಾಲೋಚನಾ ಸಭೆಯನ್ನು ನಡೆಸಿ ಮಗು ಸ್ನೇಹಿ ಪರಿಕಲ್ಪನೆಯ ಅನಿವಾರ್ಯತೆಯ ಕುರಿತಂತೆ ಮಗು ಕೇಂದ್ರಿತ ಪ್ರವರ್ತಕರೊಂದಿಗೆ ಚರ್ಚೆ ಮಾಡಲಾಯಿತು.
- ಅರ್.ಟಿ.ಇ ವಸ್ತು ಸ್ಥಿತಿಯ ಕುರಿತಂತೆ ಅಧ್ಯಯನ ನಡೆಸಲು ಪ್ರಶ್ನಾವಳಿ ರಚನೆ ಮತ್ತು ಅಂತಿಮೀಕರಣಗೊಳಿಸಲು ನಿರಂಜನಾರಾಧ್ಯ ನೇತೃತ್ವದಲ್ಲಿ ಸಮಾಲೋಚನಾ ಸಭೆಯನ್ನು ನಡೆಸಿ ಪ್ರಶ್ನಾವಳಿಯನ್ನು ಅಂತಿಮಗೊಳಿಸಲಾಯಿತು.
- ಅಂತಿಮಗೊಂಡ ಪ್ರಶ್ನಾವಳಿಯನ್ನು 16 ಜಿಲ್ಲೆಯ 480 ಶಾಲೆಗಳಲ್ಲಿ ಅರ್.ಟಿ.ಇ ವಸ್ತುಸ್ಥಿತಿಯ ಕುರಿತಂತೆ ಅಧ್ಯಯನ ನಡೆಸುವ ಸಲುವಾಗಿ ಮಗು ಸ್ನೇಹಿ ಕ್ಷೇತ್ರದಲ್ಲಿ ಕೆಲಸ ಮಾಡುವ ಪ್ರವರ್ತಕರಿಗೆ ತರಬೇತಿಯನ್ನು ದಾವಣಗೆರೆಯ ಹರಿಹರ ಮತ್ತು ಉಡುಪಿಯ ಜಿಲ್ಲೆಯ ಬಾಲಭವನದಲ್ಲಿ ನಡೆಸಲಾಗಿದ್ದು 16 ಜಿಲ್ಲೆಯಲ್ಲಿ ಅಧ್ಯಯನ ನಡೆಸುವ ಸಂಸ್ಥೆಗಳ ಪ್ರತಿನಿಧಿಗಳಿಗೆ ಪ್ರಶ್ನಾವಳಿಯ ಕುರಿತಂತೆ ಮತ್ತು ಸಂಗ್ರಹಿಸಬೇಕಾದ ಮಾಹಿತಿಯ ಬಗ್ಗೆ ತರಬೇತಿಯನ್ನು ನೀಡಲಾಯಿತು. ಪ್ರತಿನಿಧಿಗಳು ಈಗಾಗಲೇ ಸಮೀಕ್ಷೆಯನ್ನು ನಡೆಸುತ್ತಿದ್ದು ಅಂತಿಮ ವರದಿಯನ್ನು ಮುಂದಿನ ದಿನಗಳಲ್ಲಿ ಸರಕಾರಕ್ಕೆ ಮಂಡಿಸಲಾಗುವುದು.

**ರಾಜ್ಯ ಮಟ್ಟದ ಅರ್.ಟಿ.ಇ ಸಮಾವೇಶ :**

ಮಗು ಸ್ನೇಹಿ ಶಾಲಾ ವಾತವರಣದ ಪರಿಕಲ್ಪನೆಯನ್ನು ರಾಜ್ಯ ಮಟ್ಟಕ್ಕೆ ಪಸರಿಸುವ ಉದ್ದೇಶ ಮತ್ತು ಆರ್.ಟಿ.ಇಯ ವಸ್ತುಸ್ಥಿತಿಯ ಬಗ್ಗೆ ರಾಜ್ಯ ಮಟ್ಟದ ಕಾರ್ಯಾಗಾರವನ್ನು ಮಾರ್ಚ್ 29ರಂದು ಎನ್.ಜಿ.ಓ ಸಭಾಂಗಣದಲ್ಲಿ ನಡೆಸಲಾಯಿತು. ಕಾರ್ಯಾಗಾರವನ್ನು ಪಡಿಯ ನಿರ್ದೇಶಕರಾದ ರೆನ್ನಿ ಡಿ'ಸೋಜ ನೇತೃತ್ವದಲ್ಲಿ, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರಾದ ಡಾ. ಕೃಪಾ ಅಮರ್ ಆಳ್ವಾರವರು, ಸದಸ್ಯರಾದ ಮರಿ ಸ್ವಾಮಿ, ಅನಂದ್ ಲೋಬೋ, ರಾಜ್ಯ ಎಸ್.ಡಿ.ಎಮ್.ಸಿ ಸಮನ್ವಯ ಸಮಿತಿ ಅಧ್ಯಕ್ಷರಾದ ಬಸವರಾಜು ಗುರಿಕಾರ್‌ರವರು, ಕೆ.ಜಿವಿ.ಎಸ್‌ನ ಕಾರ್ಯದರ್ಶಿಯಾದ ಇ. ಬಸವರಾಜು, ಮಗು ಮತ್ತು ಕಾನೂನು



ಸಂಸ್ಥೆಯ ಡಾ. ನಿರಂಜನಾರಾಧ್ಯರವರು ಹಾಗೂ ಬಾಲ್ಯ ನಕ್ಷತ್ರ ಮಕ್ಕಳ ಸಂಘದ ಪ್ರತಿನಿಧಿಗಳು ಅಲ್ಲದೆ ಇತರ ಪ್ರಮುಖ ವ್ಯಕ್ತಿಗಳು ಉಪಸ್ಥಿತರಿದ್ದರು.

ಸಭೆಯಲ್ಲಿ **'ಶಿಕ್ಷಣ ಹಕ್ಕು- ಇದು ನಿಮಗೆ ಗೊತ್ತೆ'** ಶಿಕ್ಷಣ ಹಕ್ಕು ಕುರಿತ ಕೈಪಿಡಿಯನ್ನು ಸಭೆಯಲ್ಲಿ ಬಿಡುಗಡೆ ಮಾಡಲಾಯಿತು. ರಾಜ್ಯ ಮಟ್ಟದ ಸಂಪರ್ಕ ಜಾಲಗಳಾದ ಪಾಪ್ರೆಯೊಂದಿಗೆ ಕೈ ಜೋಡಿಸಿರುವ ವಿವಿಧ ಸಂಘಟನೆಗಳ ಪ್ರತಿನಿಧಿಗಳು, ಸಾಮಾಜಿಕ ಕಾರ್ಯಕರ್ತರು, ಮಕ್ಕಳ ಹಕ್ಕುಗಳ ಹೋರಾಟಗಾರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಡಾ. ನಿರಂಜನಾರಾಧ್ಯರವರು ಸಭೆಯನ್ನು ಉದ್ದೇಶಿಸಿ ಸರಕಾರಿ ಶಾಲೆಗಳಲ್ಲಿನ ಪ್ರಸ್ತುತ ಪರಿಸ್ಥಿತಿಯ ಬಗ್ಗೆ ಅಂಕಿ ಅಂಶಗಳ ಸಮೇತ ಚಿತ್ರಣವನ್ನು ನೀಡಿದರು. ನಂತರ ಸಭೆಯಲ್ಲಿ ವಿವಿಧ ಸಂಘಟನೆಗಳು ವಿವಿಧ ವಿಚಾರಗಳ ಬಗ್ಗೆ ವಿಷಯ ಮಂಡನೆಯನ್ನು ಮಾಡಿದರು. ಅಂತಿಮವಾಗಿ ಶಿಕ್ಷಣ ಹಕ್ಕು ಕಾಯಿದೆಯ ಅನುಷ್ಠಾನದಲ್ಲಿನ ಕುಂದು ಕೊರತೆಗಳ ಬಗ್ಗೆ ಸರಕಾರ ಮತ್ತು ಜನ ಸಮುದಾಯಗಳ ಗಮನ ಸೆಳೆಯುವ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು ಅಲ್ಲದೆ ಮನವಿಯನ್ನು ಸರಕಾರಕ್ಕೆ ಸಲ್ಲಿಸಲಾಯಿತು.

## 9. ಶಾಲೆಗಳಲ್ಲಿ ನೀಡುವ ಮನೆಕೆಲಸ(ಹೋಂವರ್ಕ್)ದ ಕುರಿತು ಅಧ್ಯಯನ

ಶಿಕ್ಷಣ ತಜ್ಞರಾದ ಡಾ. ಸುಕುಮಾರ್ ಗೌಡ ನೇತೃತ್ವದಲ್ಲಿ, ಶಿಕ್ಷಣ ಇಲಾಖೆ ಮತ್ತು ಮಕ್ಕಳ ಮಂಟಪ ಹಾಗೂ ಪಡಿ ಸಂಸ್ಥೆಯ ಜಂಟಿ ಆಶ್ರಯದಲ್ಲಿ ಮನೆಕೆಲಸ(ಹೊಂವರ್ಕ್)ದ ಪರಿಣಾಮ ಮತ್ತು ಉಪಯೋಗಗಳ ಕುರಿತು ದ.ಕ ಜಿಲ್ಲೆಯ ಐದು ತಾಲೂಕಿನ ಆಯ್ದ ಸರಕಾರಿ, ಅನುದಾನಿತ ಮತ್ತು ಖಾಸಗಿ ಸೇರಿದಂತೆ 100 ಶಾಲೆಗಳನ್ನು ಆಯ್ಕೆ ಮಾಡಿ ಆ ಶಾಲೆಯ ಸುಮಾರು 600 ಮಕ್ಕಳು ಮತ್ತು ಅವರ ಹೆತ್ತವರು ಹಾಗೂ 300 ಶಿಕ್ಷಕರ ಅಭಿಪ್ರಾಯಗಳನ್ನು ಅಭಿವೃದ್ಧಿ ಪಡಿಸಿದ ಪ್ರಶ್ನಾವಳಿಯ ಮೂಲಕ ಮಾಹಿತಿ ಕಲೆ ಹಾಕುವವರಿಗೆ ಮಾಹಿತಿ ಸಂಗ್ರಹವನ್ನು ಹೇಗೆ ಮಾಡಬೇಕು ಎಂಬ ಬಗ್ಗೆ ತರಬೇತಿ ನೀಡಿ ನವಂಬರ್ ತಿಂಗಳಲ್ಲಿ ಮಾಹಿತಿಯನ್ನು ಕಲೆ ಹಾಕಲಾಯಿತು. ಕಲೆ ಹಾಕಿದ ಲಭ್ಯ ದತ್ತಾಂಶಗಳನ್ನು ಗಣಕೀಕೃತವಾಗಿ ಕ್ರೋಢೀಕರಣಗೊಳಿಸಿ ವಿಶ್ಲೇಷಣೆಯ ಪ್ರಕ್ರಿಯೆಯು ಪ್ರಗತಿಯಲ್ಲಿದೆ.



## 10. ಗುಣಾತ್ಮಕ ಶಿಕ್ಷಣಕ್ಕೆ ಪೂರಕವಾಗಿ ಕೈಗೊಂಡ ಇನ್ನಿತರ ಪ್ರಮುಖ ಚಟುವಟಿಕೆಗಳು:

### ✦ ಮಕ್ಕಳ ಸಂಸತ್ ಕಾರ್ಯಕ್ರಮ:

ಮಕ್ಕಳ ಸಂಸತ್ ಕಾರ್ಯಕ್ರಮವನ್ನು ಶಿಕ್ಷಣ ಸಂಪನ್ಮೂಲ ಕೇಂದ್ರದ ಸಹಯೋಗದಲ್ಲಿ ಉಡುಪಿ ಮತ್ತು ದ.ಕ ಜಿಲ್ಲೆಯ 8 ತಾಲೂಕಿನಲ್ಲಿ ಆಯೋಜಿಸಿ ಮಕ್ಕಳ ಸಮಸ್ಯೆಗಳ ಬಗ್ಗೆ ಶಾಸಕರೊಂದಿಗೆ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಜಿಲ್ಲಾ ಮಟ್ಟದಲ್ಲಿ ಮಕ್ಕಳು ನಗರಾಭಿವೃದ್ದಿ ಹಾಗೂ ಉಸ್ತುವಾರಿ ಸಚಿವರಾದ ವಿನಯ್ ಕುಮಾರ್ ಸೊರಕೆ ಜೊತೆ ಸಂವಾದವನ್ನು ನಡೆಸಿದರು. ಉಡುಪಿ ಜಿಲ್ಲೆಯ ನವರಾಜ್ ಹಾಗೂ ರಶ್ಮಿ ಮತ್ತು ದ.ಕ ಜಿಲ್ಲೆಯಲ್ಲಿ ರಿಯಾ ಜಾರ್ಜ್ ಮತ್ತು ದೀಕ್ಷಾ ಎಂ. ಪ್ರತಿನಿಧಿಸಿ ಮುಖ್ಯ ಮಂತ್ರಿಗಳೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು, (ನವರಾಜ್ –ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಬಸ್ರಿ ಬೈಲೂರು – ನಮ್ಮ ಮಗು ಸ್ನೇಹಿ ಶಾಲೆಯ ವಿದ್ಯಾರ್ಥಿಯೆಂಬುದು ವಿಶೇಷ).



### ✦ ಎಸ್.ಡಿ.ಎಂ.ಸಿ ಸಮಾವೇಶ

ಎಸ್.ಡಿ.ಎಂ.ಸಿ ಸದಸ್ಯರು ತಮ್ಮ ಜವಾಬ್ದಾರಿ ಅರಿತು ಕೊಂಡು ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುವಲ್ಲಿ ಪ್ರಯತ್ನಿಸಬೇಕು ಹಾಗೆಯೇ ಅವರು ತಮ್ಮದೇ ಆದ ಸಂಘಟನೆಯನ್ನು ಕಟ್ಟಿಕೊಂಡು ಸಮಾನ ಶಾಲಾ ಪದ್ದತಿ ಜಾರಿಗೊಳಿಸುವಲ್ಲಿ ಹಾಗೂ ಸರಕಾರಿ ಶಾಲೆಗಳನ್ನು ಉಳಿಸಿ, ಬೆಳೆಸುವಲ್ಲಿ ಎಸ್.ಡಿ.ಎಂ.ಸಿ ಸದಸ್ಯರು ಕ್ರಿಯಾಶೀಲಗೊಳ್ಳಬೇಕು ಎನ್ನುವ ದೃಷ್ಟಿಯಿಂದ ಎಸ್.ಡಿ.ಎಂ.ಸಿ ಸಮಾವೇಶ ವನ್ನು ಉಡುಪಿ ಜಿಲ್ಲೆಯ 3 ತಾಲೂಕುಗಳಲ್ಲಿ ಹಮ್ಮಿಕೊಳ್ಳಲಾಯಿತು. ಹಾಗೆಯೇ ಎಸ್.ಡಿ.ಎಂ.ಸಿ ಸಂಘಟನೆಯನ್ನು ಬಲಗೊಳಿಸುವ ನೆಲೆಯಲ್ಲಿ ತಾಲೂಕು ಮಟ್ಟದ ಎಸ್.ಡಿ.ಎಂ.ಸಿ ಸಮನ್ವಯ ವೇದಿಕೆಯನ್ನು ಹಾಗೂ ಜಿಲ್ಲಾ ಮಟ್ಟದ ಎಸ್.ಡಿ.ಎಂ.ಸಿ



ಸಮನ್ವಯ ವೇದಿಕೆಯನ್ನು ರಚಿಸಲಾಯಿತು. (ರಾಜ್ಯ ಎಸ್.ಡಿ.ಎಂ.ಸಿ ಸಮನ್ವಯ ವೇದಿಕೆಯ ಕಾರ್ಯದರ್ಶಿಯಾಗಿ ಶೋಭಾ ಭಾಸ್ಕರ್ ಶಿಕ್ಷಣ ಸಂಪನ್ಮೂಲ ಕೇಂದ್ರ ಸದಸ್ಯೆಯಾಗಿರುವುದು ವಿಶೇಷ)

### ✦ ಲಾಕೋ ಮೇ ಎಕ್ ಕಾರ್ಯಕ್ರಮ:

ಅಸರ್ ಕೇಂದ್ರವು ಪ್ರತಿ ವರ್ಷ ನಡೆಸುವ ಅಸರ್ ಸಮೀಕ್ಷೆಯ ಲಾಕೋ ಮೇ ಎಕ್ ಕಾರ್ಯಕ್ರಮದಡಿಯಲ್ಲಿ ಹಳ್ಳಿಗಳಲ್ಲಿ ಮಕ್ಕಳ ಕಲಿಕಾ ಮಟ್ಟವನ್ನು ಅಳೆಯುವ ಹೊಸ ವಿಧಾನದ ಬಗ್ಗೆ ಪ್ರಥಮ್ ಫೌಂಡೇಷನ್‌ನ ಮಹೇಂದ್ರರವರು ಸಮೀಕ್ಷೆ ನಡೆಸುವ ಬಗ್ಗೆ ತರಬೇತಿ ನೀಡಿದರು. ಇದೊಂದು ಹೊಸ ವಿಧಾನವಾಗಿದ್ದು ಸಮೀಕ್ಷೆಯಲ್ಲಿ ಮಕ್ಕಳ ಕಲಿಕಾ ಮಟ್ಟವನ್ನು ವೈಜ್ಞಾನಿಕ ವಿಧಾನದ ಮೂಲಕ ಪರಿಶೀಲಿಸಿ ಬಂದಂತಹ ಮಾಹಿತಿಯನ್ನು ಆ ಹಳ್ಳಿಯ ಮುಖ್ಯಸ್ಥರು ಅಥವಾ ಶಾಲಾ ಮುಖ್ಯಸ್ಥರಿಗೆ ವರದಿ ಸಲ್ಲಿಸುವುದಾಗಿದೆ.

ಶಿಕ್ಷಣ ಸಂಪನ್ಮೂಲ ಕೇಂದ್ರದ ಸದಸ್ಯರು, ಎಸ್.ಡಿ.ಎಮ್.ಸಿ ಸದಸ್ಯರು ಉಡುಪಿ ಜಿಲ್ಲೆಯ ಸುಮಾರು 14 ಹಳ್ಳಿಗಳಲ್ಲಿ ಮಕ್ಕಳ ಕಲಿಕಾ ಸಾಮಾರ್ಥ್ಯದ ಕುರಿತು ಸಮೀಕ್ಷೆಯನ್ನು ಮಾಡಲಾಯಿತು. ಅನೇಕ ಎಸ್.ಡಿ.ಎಂ.ಸಿ ಸದಸ್ಯರು ಮಕ್ಕಳ ಕಲಿಕಾ ಸಾಮರ್ಥ್ಯದ ಮೌಲ್ಯಮಾಪನವನ್ನು ತಮ್ಮ ಶಾಲೆಗಳಲ್ಲಿ ಮಾಡಿದ್ದರು.





### ✦ ಮಗು ಸ್ನೇಹಿ ಸ್ಮಾರ್ಟ್ ಸಿಟಿಯ ಕುರಿತು ಸಮಾಲೋಚನಾ ಸಭೆ:

ಕೇಂದ್ರ ಸರಕಾರದ ಪ್ರಮುಖ ಯೋಜನೆಯಾದ 100 ಸ್ಮಾರ್ಟ್ ಸಿಟಿ ಯಲ್ಲಿ ಮಂಗಳೂರನ್ನು ಆಯ್ಕೆ ಮಾಡಲಾಗಿದ್ದು ಸ್ಮಾರ್ಟ್ ಸಿಟಿ ಹೇಗಿರಬೇಕು ಎಂಬುದರ ಬಗ್ಗೆ ಸಾರ್ವಜನಿಕ ಅನಿಸಿಕೆಯನ್ನು ಮಂಗಳೂರು ನಗರ ಪಾಲಿಕೆ ಆಹ್ವಾನಿಸಿದ್ದು ಈ ಕುರಿತಂತೆ ಪಡಿಯು ಮಗು ಸ್ನೇಹಿ ಸ್ಮಾರ್ಟ್ ಸಿಟಿಯ ಪರಿಕಲ್ಪನೆಯನ್ನು ಅಳವಡಿಸುವಂತೆ ಒತ್ತಾಯಿಸಲು ಮತ್ತು ಅದು ಒಳಗೊಳ್ಳಬೇಕಾದ ಅಂಶಗಳ ಬಗ್ಗೆ ಚರ್ಚಿಸಲು ಸಮಾಲೋಚನಾ ಸಭೆಯನ್ನು ರೋಶನಿ ನಿಲಯದ ಸಭಾಂಗಣದಲ್ಲಿ ರೆನ್ನಿ ಡಿ'ಸೋಜ ನೇತೃತ್ವದಲ್ಲಿ ನಡೆಯಿತು. ಸಮಾಲೋಚನಾ ಸಭೆಯಲ್ಲಿ ಹಲವು ಶಿಕ್ಷಣಾಸಕ್ತರು ಭಾಗವಹಿಸಿದ್ದು ತಮ್ಮ ಸಲಹೆ ಸೂಚನೆಯನ್ನು ನೀಡಿ ಯಾವುದೇ ಯೋಜನೆಗಳನ್ನು ರೂಪಿಸುವಾಗ ಮಕ್ಕಳ ಆಸಕ್ತಿಗಳನ್ನು, ಮಕ್ಕಳ ಹಕ್ಕುಗಳು ರಕ್ಷಣೆಗೆ ಪೂರಕವಾಗಿರಬೇಕು ಮತ್ತು ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಮಗು ಸ್ನೇಹಿ ಅಂಶಗಳನ್ನು ಸೇರಿಸಿ ಮಹಾನಗರ ಪಾಲಿಕೆಗೆ ಸಲ್ಲಿಸುವ ಕುರಿತು ನಿರ್ಣಯಿಸಲಾಯಿತು.

ಅಲ್ಲದೆ ಸ್ಮಾರ್ಟ್ ಸಿಟಿಯ ಧ್ಯೇಯ ವಾಕ್ಯ (Concept Note)ವನ್ನು ರೂಪಿಸಲು ಸಾರ್ವಜನಿಕರಿಂದ ಅಭಿಪ್ರಾಯವನ್ನು ಆಹ್ವಾನಿಸಿದ್ದು ಪಡಿಯ ನಿರ್ದೇಶಕರು ಕಳುಹಿಸಿದ ಧ್ಯೇಯ ವಾಕ್ಯ ಉತ್ತಮವೆಂದು ಪರಿಗಣಿಸಲಾಗಿದ್ದು ನಗದು ಪುರಸ್ಕಾರಕ್ಕೆ ಆಯ್ಕೆಯಾಗಿದೆ.

### ✦ ಸಮಾಜಕಾರ್ಯ ವಿಭಾಗದ ವಿದ್ಯಾರ್ಥಿಗಳಿಗೆ ಕ್ಷೇತ್ರ ಅಧ್ಯಯನ ತರಬೇತಿ :

ಪಡಿಯು ದ.ಕ ಮತ್ತು ಉಡುಪಿ ಜಿಲ್ಲೆಯ ಸಮಾಜ ಕಾರ್ಯ ಕಾಲೇಜುಗಳ ವಿದ್ಯಾರ್ಥಿಗಳಿಗೆ ಕ್ಷೇತ್ರ ಕಾರ್ಯ ಅನುಭವಕ್ಕಾಗಿ ಪ್ರತಿ ವರ್ಷವು ತರಬೇತಿ ಕಾಯಕ್ರಮವನ್ನು ನಡೆಸುತ್ತಿದೆ. ಮಕ್ಕಳ ಹಕ್ಕುಗಳು ಮತ್ತು ಮೌಲ್ಯಯುತ ಶಿಕ್ಷಣದಲ್ಲಿ ಕ್ಷೇತ್ರ ಅನುಭವ ಪಡೆಯಲು ಪಡಿಯ ಕಾರ್ಯವ್ಯಾಪ್ತಿಯಲ್ಲಿ ನಿಯೋಜನೆ ಮಾಡಿ ತಳಮಟ್ಟದಲ್ಲಿ ಸಮುದಾಯ ಮತ್ತು ಸಾಂಸ್ಥಿಕ ನೆಲೆಗಟ್ಟಿನಲ್ಲಿ ನಿರ್ವಹಿಸಬಹುದಾದ ಕಾರ್ಯಗಳ ಬಗ್ಗೆ ಅವಕಾಶವನ್ನು ರೂಪಿಸಿಕೊಡುತ್ತಿದೆ.



ನಮ್ಮ ಸಂಸ್ಥೆಗೆ ಕಾಲೇಜುಗಳಿಂದ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಬಗ್ಗೆ ಸವಿವರವಾದ ಮಾಹಿತಿಯನ್ನು ನೀಡುವ ಸಲುವಾಗಿ ಪ್ರತಿ ವರ್ಷವು ಒರಿಯೆಂಟೇಷನ್ ಕಾರ್ಯಕ್ರಮವನ್ನು ಹಮ್ಮಿಕೊಂಡು ಈ ತರಬೇತಿ ಕಾರ್ಯಕ್ರಮದ ರೂಪುರೇಷೆಗಳ ಬಗ್ಗೆ ಮತ್ತು ವಿದ್ಯಾರ್ಥಿಗಳು ಮಾಡಬೇಕಾದ ಕರ್ತವ್ಯಗಳ ಬಗ್ಗೆ ಮಾಹಿತಿಯನ್ನು ನೀಡಿ, ಒಂದು ವರ್ಷದಲ್ಲಿ ಅವರು ಕೇಸ್ ಸ್ಟಡಿ, ಗ್ರೂಪ್ ವರ್ಕ್, ಸಮುದಾಯ ಅಧ್ಯಯನ, ಮಾಹಿತಿ ಹಕ್ಕಿನ ಮೂಲಕ ಮಾಹಿತಿ ಸಂಗ್ರಹಣೆ ಮತ್ತು ಸಂಸ್ಥೆಯ ದಾಖಲಾತಿ ವಿಭಾಗದಲ್ಲಿ ದಾಖಲೆಗಳ ನಿರ್ವಹಣೆ ಕುರಿತಂತೆ ತರಬೇತಿ ನೀಡಲಾಗುತ್ತದೆ ಮತ್ತು ಕಾರ್ಯಕ್ರಮ ಆಯೋಜನೆ, ಸಂಘಟನೆಯಲ್ಲಿ ಕ್ಷೇತ್ರ ಕಾರ್ಯದ ಅನುಭವದೊಂದಿಗೆ, ವೃತ್ತಿಪರ ಕೌಶಲ್ಯವನ್ನು ಬೆಳೆಸಲು ಮತ್ತು ಸಮಾಜ ಕಾರ್ಯದ ಸಿದ್ಧಾಂತಗಳನ್ನು ಕ್ಷೇತ್ರ ಕಾರ್ಯದಲ್ಲಿ ಅಳವಡಿಸಲು ಪೂರಕವಾದ ವಾತಾವರಣ ನಿರ್ಮಿಸಿ ಕೊಡುತ್ತಿದೆ.

ಪಡಿಯಲ್ಲಿ ಕ್ಷೇತ್ರ ಕಾರ್ಯ ಅನುಭವಕ್ಕಾಗಿ ವಿದ್ಯಾರ್ಥಿಗಳು ಒಂದು ವರ್ಷದ ಅವಧಿಯ ತರಬೇತಿಯನ್ನು ಪೂರೈಸಬೇಕಾಗಿದ್ದು, ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಡಿಯಲ್ಲಿ ನಿಯೋಜನೆ ಮಾಡಿ ತರಬೇತಿ ಪಡೆಯಲು ಅವಕಾಶ ರೂಪಿಸಿದೆ ಮತ್ತುಅವರ ನಿರ್ದೇಶನದಂತೆ ಕ್ಷೇತ್ರ ಕಾರ್ಯವನ್ನು ಮಾಡಿ ಅವರ ಮೌಲ್ಯಮಾಪನ ಮತ್ತು ವೈವಾದಲ್ಲಿ ತೋರ್ಪಡಿಸಿದ ನಿರ್ವಹಣೆಯಆಧಾರದಲ್ಲಿ ಗ್ರೇಡ್ ಮತ್ತು ಪ್ರಮಾಣ ಪತ್ರವನ್ನು ನೀಡಲಾಗುತ್ತಿದೆ.



### ✦ ಪಡಿ ತಂಡದ ಅಧ್ಯಯನ ಪ್ರವಾಸ

ಪಡಿ ತಂಡ 2014–17ರ ಯೋಜನೆಯ ಪರಿಕಲ್ಪನೆಯ ಮಗು ಸ್ನೇಹಿ ಸಮಾಜದ ನಿರ್ಮಾಣದ ಹಿನ್ನೆಲೆಯಲ್ಲಿ ಶಾಲೆ ಹಾಗೂ ಪಂಚಾಯತ್ ವ್ಯಾಪ್ತಿಯಲ್ಲಿ ಹೆಚ್ಚಿನ ಮುತುವರ್ಜಿಯಲ್ಲಿ ತನ್ನದೇ ಧ್ಯೇಯ ವೈಖರಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಕಾರ್ಯಕ್ಷೇತ್ರದಲ್ಲಿ ತಂಡವನ್ನು ಬಲಪಡಿಸಲು ಮತ್ತು ಪರಿಣಾಮಕಾರಿ ಚಿಂತನೆ ನಡೆಸಲು ಪೂರಕವಾಗಿ ಕ್ಷೇತ್ರ ಅಧ್ಯಯನವನ್ನು ನಡೆಸುವ ವಿಚಾರವನ್ನು ತಂಡದಲ್ಲಿ ಚರ್ಚಿಸಿ ಕೇರಳದ ಶಿಕ್ಷಣದ ಬಗ್ಗೆ ತಿಳಿದುಕೊಳ್ಳುವುದು ಸೂಕ್ತವೆಂದು ತಂಡವು ತೀರ್ಮಾನಿಸಿ ಕೇರಳದ ಕಾಸರಗೋಡಿನ 3 ಪಂಚಾಯತು ಮತ್ತು3 ಶಾಲೆಗಳ ಬೇಟಿಯೊಂದಿಗೆ ಐ.ಟಿ ಸ್ಕೂಲ್, ಎಂಡೋ ಸಲ್ಫಾನ್ ಪರಿಣಾಮಕ್ಕೆ ತುತ್ತಾದ ಅಂಗವಿಕಲ ಮಕ್ಕಳಿಗಾಗಿ ಶಾಲೆಯೊಂದನ್ನು ಬಡ್ಸ್ ಸಂಸ್ಥೆಯು ನಡೆಸುತ್ತಿದ್ದು ಅಲ್ಲಿಗೆ ಭೇಟಿ ಮತ್ತು ಚೈಲ್ಡ್‌ಲೈನ್‌ಗೆ ಭೇಟಿ ನೀಡಿ ಅಲ್ಲಿನ ವಸ್ತುಸ್ಥಿತಿಗಳ ಬಗ್ಗೆ ಅಧ್ಯಯನ ಮಾಡಿ ಉತ್ತಮ ಅಂಶಗಳನ್ನು ನಮ್ಮ ಕಾರ್ಯಕ್ಷೇತ್ರಗಳಲ್ಲಿ, ಅಲ್ಲಿನ ಹೊಸ ವಿಚಾರಗಳನ್ನು ಆಳವಡಿಸಿಕೊಳ್ಳುವ ಸಲುವಾಗಿ ತಂಡವು ಒಟ್ಟಾಗಿ ಫೆಬ್ರವರಿಯ ದಿನಾಂಕ 9, 10 ಹಾಗೂ 11 ತಾರೀಕಿನಂದು ಭೇಟಿ ನೀಡಲಾಯಿತು.

ಸ್ಥಳಿಯ ಸರಕಾರಗಳು ಕೇರಳದಲ್ಲಿ ಬಹಳಷ್ಟು ಅಧಿಕಾರ ಹಾಗೂ ಜವಾಬ್ದಾರಿಯನ್ನು ಹೊಂದಿವೆ. ಗ್ರಾಮ ಪಂಚಾಯತ್‌ಗಳು ಕರ್ನಾಟಕಕ್ಕಿಂತ ವಿಭಿನ್ನವಾಗಿತ್ತು. ಶಿಕ್ಷಣದ ಮೇಲ್ವಿಚಾರಣೆಯಲ್ಲಿ ಪಂಚಾಯತ್ ಸಾಕಷ್ಟು ಕಾರ್ಯ ನಿರ್ವಹಿಸುತ್ತಿದೆ. ಗ್ರಾಮದಲ್ಲಿ ಪಂಚಾಯತ್ ಶಿಕ್ಷಣ ಸಮಿತಿಗಳ ಮೂಲಕ ಸಮಗ್ರ ಶಿಕ್ಷಣದ ಅಭಿವೃದ್ಧಿ ಕಾರ್ಯ ಹಮ್ಮಿಕೊಳ್ಳಲಾಗುತ್ತಿದೆ. ಈ ಸಮಿತಿಯಲ್ಲಿ ಪಂಚಾಯತ್ ಅಧ್ಯಕ್ಷರು, ಮತ್ತು ಕೆಲವು ಸದಸ್ಯರು ಶಾಲಾ ಮುಖ್ಯೋಪಾಧ್ಯಾಯರು, ಶಾಲಾ ಎಸ್.ಎಮ್.ಸಿ ಸದಸ್ಯರು ಸದಸ್ಯರಾಗಿರುತ್ತಾರೆ. ನಾವು ಭೇಟಿ ಮಾಡಿದ ಮೊದಲ ಪಂಚಾಯತ್ ಮಡಿಕೈ ಪಂಚಾಯತ್. ಹಲವು ಸಾಧನೆಗಳನ್ನು ಮಾಡಿ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದೆ. ವರ್ಷದಲ್ಲಿ ಒಂದು ಬಾರಿ ವಿಶೇಷ ಗ್ರಾಮ ಸಭೆ, ಬಾಲ ಸಭಾವನ್ನು ನಡೆಸಲಾಗುತ್ತಿದೆ, ಮಕ್ಕಳು ಮತ್ತು ಮಹಿಳೆಯರಿಗಾಗಿ ಜಾಗೃತಿ ಸಮಿತಿಯ ಕಾರ್ಯ ನಿರ್ವಹಿಸುತ್ತಿದೆ, ಪಂಚಾಯತ್ ವ್ಯಾಪ್ತಿಯಲ್ಲಿ ಯಾವುದೇ ಖಾಸಗಿ ಶಾಲೆಗಳು ಇರದೇ ಇರುವುದು ವಿಶೇಷತೆ. ಈ ಅಧ್ಯಯನ ಪ್ರವಾಸವು ಪಡಿ ಸಂಸ್ಥೆಯ ಸಿಬ್ಬಂದಿಗಳಿಗೆ ಸಾಕಷ್ಟು ಅನುಭವವನ್ನು ತಮ್ಮ ಕಾರ್ಯಕ್ಷೇತ್ರದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ನೆರವಾಯಿತು.

ಇದೊಂದು ಮಾದರಿ ಪ್ರಯತ್ನವಾದುದರಿಂದ ನಮ್ಮ ಸಂಪನ್ಮೂಲ ಕೇಂದ್ರಗಳ ಸದಸ್ಯರು ಈ ಮಾದರಿಯ ಅನುಭವವನ್ನು ಪಡೆಯುವ ಕುರಿತು ಅಲೋಚಿಸುತ್ತಿದ್ದಾರೆ.



### 2015–16 ನೇ ಸಾಲಿನಲ್ಲಿ ಹೊರತರಲಾದ ಪ್ರಕಟಣೆಗಳು:

1. ಮಕ್ಕಳ ಹಕ್ಕುಗಳ ಕೋಶದ ಸುತ್ತೋಲೆ ಪ್ರತಿ
2. ಸರಕಾರಿ ಶಾಲೆ ಉಳಿಯಲಿ ಬೆಳೆಯಲಿ ಕರಪತ್ರ
3. ಪೋಕ್ಸೋ ಪೋಸ್ಟರ್
4. ಆರ್.ಟಿ.ಇ ಕರಪತ್ರ
5. ಕನ್ನಡಕ್ಕೆ ಬಾಷಾಂತರಿಸಿದ ಮನೋ ದೈಹಿಕ ದಂಡನೆಯ ಕುರಿತು NCPCR ಮಾರ್ಗದರ್ಶಿ ಸೂತ್ರಗಳು
6. ಶಾಲೆಗಳಲ್ಲಿ ದೈಹಿಕ ಶಿಕ್ಷೆ ಕುರಿತಂತೆ ಕರಪತ್ರ
7. ಆರ್.ಟಿ.ಇ ಮಾಹಿತಿ ಫಲಕ

ನಿರ್ವಹಣೆ
ರೆನ್ನಿ ಡಿ'ಸೋಜ

ಪ್ರಕಟನೆ
ದಾಖಲಾತಿ, ಸಂಶೋಧನೆ ಮತ್ತು ತರಬೇತಿ ವಿಭಾಗ, ಪಡಿ

ಸಲಹೆ ಮತ್ತು ಸಹಕಾರ
ಪಡಿ ಬಳಗ

ವಿಳಾಸ : ಗುಣಾತ್ಮಕ ಶಿಕ್ಷಣಕ್ಕಾಗಿ, ಮಕ್ಕಳ ಸ್ನೇಹಿ ಸಮಾಜ ನಿರ್ಮಾಣ
ಪಡಿ, ಗಣೇಶ, ಕೊಲಾಸೊ ಆಸ್ಪತ್ರೆಯ ಬಳಿ, 2ನೇ ಅಡ್ಡ ರಸ್ತೆ, ಬೆಂದೂರುವೆಲ್, ಮಂಗಳೂರು – 02.
ದೂರವಾಣಿ: 0824-2439895 www.padivalored.com